5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **04**
ಸಿಡಬ್ಲೂ **03**

| | | |
|---|---|---|
| ಸಾಕ್ಷಿ ಹೆಸರು | - | ರಿಯಾಜ್ ಅಹಮದ್ |
| ತಂದೆ ಹೆಸರು | - | ದಿಃ ಭಕ್ಷಿಸಾಬ್ |
| ವಯಸ್ಸು | - | **32** ವರ್ಷ |
| ಉದ್ಯೋಗ | - | ಪೊಲೀಸ್ ಕಾನ್ಸ್ ಟೇಬಲ್, ಅಜ್ಜಂಪುರ ಪೋಲಿಸ್ ಠಾಣೆ,. |
| ವಿಳಾಸಃ | - | ತರಿಕೆರೆ |

ಪ್ರಮಾಣ ವಚನ ಭೋದಿಸಿದ ದಿನಾಂಕಃ **28-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಕಳೆದ ಮೂರುವರೆ ವರ್ಷಗಳಿಂದ ಪೊಲೀಸ್ ಕಾನ್ಸ್ ಟೇಬಲ್ ಆಗಿ ಅಜ್ಜಂಪುರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ **01-03-2016** ರಂದು ನನಗೆ ಮತ್ತು ಚಾಸಃ **4** ನವೀನ್ ಕುಮಾರ್ ರವರಿಗೆ ಚಾಸಃ **1** ರವರು ಚಿಕ್ಕಮಗಳೂರು ಜಿಲ್ಲೆ ಬಸವನಹಳ್ಳಿ ಠಾಣೆಯ ಮೊಕದ್ದಮೆ ಸಂಃ **60/2016** ರ ಕಲಂಃ **420** ಭಾ.ದಂ.ಸಂ. ಹಾಗೂ ಮಾನ್ಯ ಎಸ್.ಪಿ.ಯವರ ಕಛೇರಿಯಲ್ಲಿ ಆರ್.ಡಿ.ಸಿ. ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಸಃ **5** ಹಾಗೂ **2** ಇವರೊಂದಿಗೆ ಸದರಿ ಮೊಕದ್ದಮೆಯ ಆರೋಪಿತರ ಪತ್ತೆಗಾಗಿ ನೇಮಕಮಾಡಿದ್ದು ಅದರಂತೆ ನಾವು ಒಂದು ಖಾಸಗಿ ಡಸ್ಟರ್ ವಾಹನ ಸಂಃ ಕೆಎ-**18**/ಪಿ-**1439** ರಲ್ಲಿ ಖಾಸಗಿ ವಾಹನದ ಚಾಲಕ ಸೇರಿ **6** ಜನರು **10.00** ಗಂಟೆಯಿಂದ ಅಜ್ಜಂಪುರ ಠಾಣೆಯಿಂದ ಹೊರಟೆವು.

ಮೊಕದ್ದಮೊ ಸಂಃ **60/2016** ರ ಪಿರ್ಯಾದಿಯ ಮೊಬೈಲ್ ನಂಃ **9448211028** ರಿಂದ ಆರೋಪಿತರ ಮೊಬೈಲ್ ಸಂಃ **9916040036** ಗೆ ಕರೆ ಮಾಡುತ್ತಾ ಹೆಚ್ಚಿನದಾಗಿ ಚಿನ್ನ ಕೊಳ್ಳುವುದಾಗಿ ಅವರಿಗೆ ನಂಬಿಕೆ ಬರುವಂತೆ ಮಾತನಾಡುತ್ತಾ ಬರುತ್ತಿರುವಾಗ ಆರೋಪಿತರು ಮೊದಲು ನಮಗೆ

ಹಿರೇಕೆರೂರಿಗೆ ಬರಲು ತಿಳಿಸಿದ್ದು, ನಂತರ ಶಿರಾಳಕೊಪ್ಪಕ್ಕೆ ಬರಲು ತಿಳಿಸಿರುತ್ತಾರೆ. ನಾವು ಶಿರಾಳಕೊಪ್ಪಕ್ಕೆ ಬಂದು ಆರೋಪಿತರ ಮೊಬೈಲ್‌ಗೆ ಕರೆ ಮಾಡಿದಾಗ ಆರೋಪಿತರು ಶಿರಾಳಕೊಪ್ಪದಿಂದ ಸೊರಬ ಮುಖ್ಯರಸ್ತೆಯ ಹತ್ತಿರ ಒಂದು ಕೆರೆ ಇದೆ ಅಲ್ಲಿಗೆ ಬನ್ನಿ ಎಂದು ಹೇಳಿದರು. ನಾವು ಸದರಿ ಸ್ಥಳಕ್ಕೆ ಹೋದಾಗ ಚತ್ರದಹಳ್ಳಿ ಎಂಬ ಬೋರ್ಡ್ ಇತ್ತು. ಅಲ್ಲಿಂದ ಸುಮಾರು 100 ಮೀಟರ್ ಕೆರೆಯ ಒಳಗಡೆ ಇಳಿದು ಹೋಗಿ ಹುಡುಕುತ್ತಿದ್ದಾಗ ಸುಮಾರು 5 ರಿಂದ 8 ಜನರು ಇದ್ದ ಗುಂಪು ಪೊದೆಯಿಂದ ಏಕಾಏಕಿ ಹೊರಬಂದು ಫೋನ್ ಮಾಡಿದ್ದು ನಾವೇ ಎಂದು ಸನ್ನೆ ಮೂಲಕ ತಿಳಿಸಿದರು. ನಾವು ಅವರ ಬಳಿ ಹೋಗುತ್ತಿದ್ದಂತೆ ಅವರಿಗೆ ನಾವು ಪೋಲಿಸರು ಎಂದು ತಿಳಿದು ಅಲ್ಲಿಯೇ ಬಿದ್ದಿದ್ದ ಕಲ್ಲುಗಳಿಂದ ಸುತ್ತುವರಿದು ಹೊಡೆಯಲು ಪ್ರಾರಂಭಿಸಿದರು.

ಆಗ ನಾವು ಕರ್ತವ್ಯದ ಮೇಲೆ ಬಂದ ಪೋಲಿಸರು ಎಂದು ಹೇಳಿದಾಗಲೂ ಬಿಡಬೇಡಿ ಇವರನ್ನು ಹೊಡೆಯಿರಿ, ಇವರಲ್ಲಿ ಯಾರಿಗಾದರೂ ಒಬ್ಬನಿಗೆ ತೆಗೆದರೆ ಬುದ್ದಿ ಬರುವುದು ಹೇಳಿ, ಅಲ್ಲಿಯೇ ಬಿದ್ದಿದ್ದ ಕಲ್ಲುಗಳು ಹಾಗೂ ಅಲ್ಲಿ ಪೊದೆಯಲ್ಲಿ ಬೆಳೆದಿದ್ದ ದೊಣ್ಣೆಗಳಿಂದ, ಕೆಲವರ ಕಬ್ಬಿಣದ ರಾಡಿನಿಂದ ಬೀಸಿ ಹೊಡೆಯಲು ಪ್ರಾರಂಭಿ, ಹಲ್ಲೆಗೆ ಯತ್ನಿಸಿದರು. ಆಗ ಚಾಸಃ1 ರವರು ನಮ್ಮ ರಕ್ಷಣೆಗೆ ಪಿಸ್ತೂಲಿನಿಂದ ಗಾಳಿಯಲ್ಲಿ ಮೇಲಕ್ಕೆ ಒಂದು ಗುಂಡು ಹಾರಿಸಿದರು. ಆದರೂ ಸಹ ಆರೋಪಿತರು ಮುಂದುವರಿದು ನಮ್ಮನ್ನು ಕೊಲೆ ಮಾಡಲು ಪ್ರಯತ್ನಿಸಿದ್ದರಿಂದ ನಮ್ಮ ರಕ್ಷಣೆಗಾಗಿ ಚಾಸಃ1 ರವರು ಪುನಃ ನಾಲ್ಕು ಸುತ್ತು ಮೇಲಕ್ಕೆ ಗಾಳಿಯಲ್ಲಿ ಗುಂಡನ್ನು ಹಾರಿಸಿರುತ್ತಾರೆ.

ಆಗ ಆರೋಪಿತರು ನಮ್ಮನ್ನು ಬಿಟ್ಟು ಓಡಿಹೋದರು. ಓಡಿಹೋಗುವಾಗ ಕೆಲವರು ಕಬ್ಬಿಣದ ರಾಡ್‌ನ್ನು ತೆಗೆದುಕೊಂಡು ಹೋದರು. ನಮ್ಮ ಮೇಲೆ ಹಲ್ಲೆ ಮಾಡುವ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಲೋ ತಮ್ಮಣ್ಣಿ, ಸುಭಾಷ್, ವೆಂಕಟೇಶ, ನಾಗೇಶ, ಮಹದೇವ, ಶಿವು ಮತ್ತು ಮಂಜ ಎಂದು ಮಾತನಾಡಿಕೊಂಡು ನಮ್ಮ ಮೇಲೆ ಹಲ್ಲೆ ಮಾಡುತ್ತಿದ್ದರು.

ಸದರಿ ಹಲ್ಲೆಯಿಂದ ನನ್ನ ಮೈಮೇಲೆ, ಬೆನ್ನಿಗೆ, ಬಲಗೈ ಮಧ್ಯದ ಬೆರಳಿಗೆ ಗಾಯವಾಗಿದ್ದರಿಂದ ಶಿರಾಳಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಕೃತ್ಯವೆಸಗುತ್ತಿದ್ದಾಗ ಸ್ಥಳಕ್ಕೆ ಎರಡು ಜನರು

ಬಂದಿದ್ದು ಅವರ ಹೆಸರು ಹಬೀಬುಲ್ಲಾ ಮತ್ತು ರಾಮಪ್ಪ ಎಂದು ತಿಳಿಯಿತು. ಕೃತ್ಯವೆಸಗುತ್ತಿದ್ದಾಗ ಆರೋಪಿತರು ಹೇಳುಕೊಳ್ಳುತಿದ್ದ ಹೆಸರುಗಳನ್ನೇ ರಾಮಪ್ಪ ಮತ್ತು ಹಬೀಬುಲ್ಲಾ ಎಂದು ತಿಳಿಸಿದ್ದು ಆಗ ಚಾಸಃ **6** ಮತ್ತು **7** ಅವರು ಗ್ರಾಮಸ್ಥರು ಎಂದು ತಿಳಿಯಿತು. ಸದರಿ ಸಾಕ್ಷಿದಾರರನ್ನು ನಾನು ನೋಡಿದರೆ ಗುರುತಿಸುತ್ತೇನೆ.

ಘಟನೆಗೆ ಸಂಬಂಧಿಸಿದಂತೆ ಚಾಸಃ**1** ರವರು ಮೇಲಾಧಿಕಾರಿಗೆ ಸಂಪರ್ಕಿಸಿ ಸೊರಬ ಠಾಣೆಯಲ್ಲಿ ದೂರು ನೀಡಿರುವುದನ್ನು ತಿಳಿದುಕೊಂಡಿರುತ್ತೇನೆ. ನಾವೆಲ್ಲರೂ ಕರ್ತವ್ಯದಲ್ಲಿದ್ದ ನಮ್ಮ ಮೇಲೆ ಆರೋಪಿತರು ಹಲ್ಲೆ ಮಾಡಿ ಕೊಲೆಗೆ ಯತ್ನಿಸಿ ಕೃತ್ಯವೆಸಗಿದ್ದಾಗಿರುತ್ತದೆ. ಸೊರಬ ಠಾಣೆಯ ತನಿಖಾಧಿಕಾರಿಯ ಮುಂದೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

ದಿಃ **07-03-2016** ರಂದು ಸೊರಬ ಠಾಣೆಯ ತನಿಖಾಧಿಕಾರಿಯು ದೂರವಾಣಿ ಮೂಲಕ ನಮಗೆ ನಿಮ್ಮ ಮೇಲೆ ಮಾಡಿದ ಆರೋಪಿತರಲ್ಲಿ ನಾಲ್ಕು ಜನರನ್ನು ಬಂಧಿಸಿದ್ದು ಗುರುತಿಸಲು ಕರೆದಿದ್ದು ನಾವು ಠಾಣೆಗೆ ಬಂದು ನಾಲ್ಕು ಆರೋಪಿತರನ್ನು ಗುರುತಿಸುತ್ತೇನೆ. ಅವರುಗಳೆಂದರೆ ವೆಂಕಟೇಶ ನಾಗೇಶ ಸುಭಾಷ್ ಮತ್ತು ತಮ್ಮಣ್ಣಿ. ನಮ್ಮ ಸಮಕ್ಷಮ ಆರೋಪಿ ಸುಭಾಷ್ ನಿಂದ ರಾಡ್ ನ್ನು ಅಮಾನತ್ತು ಪಡಿಸಿಕೊಂಡರು. ಒಂದು ಕಪ್ಪು ಬಣ್ಣದ ಸ್ಯಾಮ್ ಸಂಗ್ ಮೊಬೈಲ್ ಸಂಃ **35** ರಿಂದ ಪ್ರಾರಂಭವಾಗಿ **312** ಗೆ ಮುಕ್ತಾಯಗೊಂಡಿದ್ದನ್ನು ತೋರಿಸಿರುತ್ತಾರೆ. ಒಂದು ಇಂಚು ಉದ್ದ ಒಂದುಕಾಲು ಇಂಚು ಸುತ್ತಳತೆಯ ಎರಡು ಖಾಲಿ ಕೋಕ್‌ಗಳನ್ನು ತೋರಿಸಿರುತ್ತಾರೆ. ತನಿಖಾಧಿಕಾರಿಯು ಆ ಸಮಯದಲ್ಲಿ ನನ್ನ ಮರುಹೇಳಿಕೆ ಪಡೆದಿದ್ದಾರೆ.

ದಿಃ **29-03-2016** ರಂದು ಸೊರಬ ಠಾಣೆಯ ತನಿಖಾಧಿಕಾರಿಯು ಪುನಃ ದೂರವಾಣಿ ಮೂಲಕ ನಮಗೆ ನಿಮ್ಮ ಮೇಲೆ ಮಾಡಿದ ಆರೋಪಿತರಲ್ಲಿ ಇನ್ನೆರಡು ಜನರನ್ನು ಬಂಧಿಸಿದ್ದು ಗುರುತಿಸಲು ಕರೆದಿದ್ದು ನಾವು ಠಾಣೆಗೆ ಬಂದು ಎರಡು ಜನ ಆರೋಪಿತರನ್ನು ಗುರುತಿಸುತ್ತೇನೆ. ಅವರುಗಳೆಂದರೆ ಮಹಾದೇವ ಮತ್ತು ಶಿವು. ಸದರಿಯವರಿಂದ ಎರಡು ಕಬ್ಬಿಣ ರಾಡ್‌ಗಳನ್ನು ವಶಪಡಿಸಿಕೊಂಡರು. ಆ ಬಗ್ಗೆ ಕೂಡ ತನಿಖಾಧಿಕಾರಿ ನನ್ನ ಮರುಹೇಳಿಕೆ ಪಡೆದಿದ್ದಾರೆ.

ದಿಃ **19-06-2016** ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇನ್ನೊಬ್ಬ ಆರೋಪಿ ಮಂಜ ಯಾನೆ ಕುಳ್ಳ ಮಂಜಾ ನಿರೀಕ್ಷಣಾ ಜಾಮೀನು ತಂದು ಹಾಜರಾಗಿದ್ದು ಆತನನ್ನು ಗುರುತಿಸಲು ತನಿಖಾಧಿಕಾರಿ ನಮ್ಮ ಕರೆದಿದ್ದು, ನಾವು ಠಾಣೆಗೆ ಹಾಜರಾಗಿ ಆತನನ್ನು ಗುರುತಿಸಿರುತ್ತೇನೆ. ಸದರಿ ಸಮಯದಲ್ಲಿಯೂ ಸಹ ತನಿಖಾಧಿಕಾರಿ ನನ್ನಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಆ ದಿನ ನಮ್ಮ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವರನ್ನು ಗುರುತಿಸುತ್ತೇನೆ.

ಚಾಸಃ**1** ರವರು ಆ ದಿನ ಗಾಳಿಯಲ್ಲಿ ಗುಂಡು ಹಾರಿಸಿದ್ದ ಮು.ಮಾ.**1** ಪಿಸ್ತೂಲ್ ನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.**3** ರಿಂದ **6** ದೊಣ್ಣೆಗಳು ಮತ್ತು ಮು.ಮಾ. **7** ರಿಂದ **10** ಕಲ್ಲುಗಳು, ಮು.ಮಾ.**12, 14** ರಿಂದ **16** ರಾಡ್ ಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಮು.ಮಾ.**13** ಮೊಬೈಲನ್ನು ಗುರುತಿಸುತ್ತೇನೆ.

ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ.ಕೆಕೆಎಸ್. ವಕೀಲರಿಂದಃ

ಮೊಕದ್ದಮೆ ಸಂಃ 60/2016 ರ ಪಿರ್ಯಾದಿನ ನಕಲು ಚಾಸಃ1 ರ ಬಳಿ ಆ ಸಮಯದಲ್ಲಿ ಇತ್ತಾ ಎಂದು ನನಗೆ ಈಗ ನೆನಪಿಲ್ಲ. ಸದರಿ ಡಸ್ಟರ್ ವಾಹನದಲ್ಲಿ ಐದು ಜನ ಮಾತ್ರ ಪ್ರಯಾಣ ಮಾಡಬಹುದು ಎಂದರೆ ಸರಿಯಲ್ಲ. ಸಾಕ್ಷಿ 6 ಜನ ಪ್ರಯಾಣಿಸಬಹುದು ಎಂದು ನುಡಿದಿದ್ದಾರೆ. ಆ ಸಮಯದಲ್ಲಿ ಆರೋಪಿತರನ್ನು ಪಿರ್ಯಾದಿದಾರನ ಮೊಬೈಲ್ ನಿಂದ ಚಾಸಃ1 ರವರು ಅವರನ್ನು ಸಂಪರ್ಕಿಸಿ ಮಾತನಾಡುತ್ತಿದ್ದರು. ನಮಗೆ ಈ ಪ್ರಕರಣದಲ್ಲಿ ಆರೋಪಿತರ ತನಿಖೆಗಾಗಿ ಹೋಗುವ ಮೊದಲು ನಮ್ಮನ್ನು ನೇಮಿಸಿರುವ ಬಗ್ಗೆ ಯಾವುದೇ ಲಿಖಿತ ದಾಖಲೆ ಕೊಡುವುದಿಲ್ಲ ಅದನ್ನು ನಮ್ಮ ಠಾಣಾಧಿಕಾರಿಯವರು ತಮ್ಮ ಡೈರಿಯಲ್ಲಿ ನಮೂದಿಸಿಕೊಳ್ಳುತ್ತಾರೆ. ಆ ಸಮಯದಲ್ಲಿ ನಮಗೆ ಪಿರ್ಯಾದುದಾರರ ಬಗ್ಗೆ ಮಾಹಿತಿ ಇದ್ದ ಬಗ್ಗೆ ನನಗೆ ನೆನಪಿಲ್ಲ.

ಆ ಸಮಯದಲ್ಲಿ ನಮಗೆ ನಾವು ಯಾವ ಉದ್ದೇಶಕ್ಕಾಗಿ ಮತ್ತು ಆರೋಪಿತರನ್ನು ತಲಾಷ್ ಮಾಡಲು ಹೋಗುತ್ತಿದ್ದೇನೆ ಮತ್ತು ಆ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇತ್ತು. ಚಾಸಃ1 ರವರು ಆರೋಪಿತರ

ಜೊತೆ ಮೊಬೈಲ್ ಸಂಪರ್ಕದಲ್ಲಿದ್ದಾಗ ಆರೋಪಿತರ ಹೆಸರನ್ನು ಹೇಳುತ್ತಿದ್ದ ಬಗ್ಗೆ ನನಗೆ ಈಗ ನೆನಪಿಲ್ಲ. ನಾವು ಶಿವಮೊಗ್ಗದಿಂದ ಬರುತ್ತಿದ್ದಾಗ ಹಿರೆಕೇರೂರಿಗೆ ಬೇಡ ಶಿರಾಳಕೊಪ್ಪ ಬನ್ನಿ ಎಂದು ಚಾಸಃ 1 ರವರೆಗ ಯಾವ ಸ್ಥಳದಲ್ಲಿ ಆರೋಪಿತರು ಮಾಹಿತಿ ನೀಡಿದ್ದಾರೆಂದು ನನಗೆ ಈಗ ನೆನಪಿಲ್ಲ. ಆ ಸಮಯದಲ್ಲಿ ಮದ್ಯಾಹ್ನ ಎಲ್ಲಿಯೂ ಊಟಕ್ಕಾಗಿ ವಾಹನ ನಿಲ್ಲಿಸದೇ ಕೇವಲ ಸ್ನಾಕ್ಸ್ ಗಳನ್ನು ತೆಗೆದುಕೊಂಡು ಬಂದಿರುತ್ತೇವೆ.

ಮೊಕದ್ದಮೆ ಸಂಃ 60/2016 ರಲ್ಲಿ ಆ ದಿನ ಪಿರ್ಯಾದುದಾರ ಎಷ್ಟು ಗಂಟೆಗೆ ಠಾಣೆಯಲ್ಲಿ ಪಿರ್ಯಾದು ಕೊಟ್ಟ ಬಗ್ಗೆ ನಮಗೆ ಆ ದಿನ ಮಾಹಿತಿ ಇತ್ತು. ಆ ದಿನ ಚಾಸಃ2 ರವರು ಚಿಕ್ಕಮಗಳೂರಿನಿಂದ ನಮ್ಮ ಠಾಣೆಗೆ ಬೆಳಿಗ್ಗೆ 9.45 – 9.50 ಗಂಟೆಯಾಗಿತ್ತು. ಚಾಸಃ 2 ರವರು ಆ ಸಮಯದಲ್ಲಿ ಅವರಿಗೆ ಎಸ್.ಪಿ.ಯವರಿಂದ ಈ ಪ್ರಕರಣದಲ್ಲಿ ಚಾಸಃ1 ರ ಜೊತೆ ಹೋಗುವಂತೆ ಸೂಚನೆ ಇದ್ದ ಬಗ್ಗೆ ಅವರ ಬಳಿ ಯಾವುದಾದರೂ ದಾಖಲಾತಿ ಇತ್ತಾ ಎಂದು ನನಗೆ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ಮೊಕದ್ದಮೆ ಸಂಃ 60/2016 ರ ಪಿರ್ಯಾದುದಾರ ನಮ್ಮ ಜೊತೆ ಇರಲಿಲ್ಲ. ಮೊಕದ್ದಮೆ ಸಂಃ 60/2016 ರ ಪಿರ್ಯಾದುದಾರ ಮೊಬೈಲ್ ನ್ನು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಲಾಗಿದೆಯಾ ಎಂದರೆ ನನಗೆ ಗೊತ್ತಿಲ್ಲ. ಅದು ಚಾಸಃ1 ಗೆ ಗೊತ್ತಿರುತ್ತದೆ. ಮು.ಮಾ.13 ಯಾವ ಆರೋಪಿಗೆ ಸೇರಿದ್ದು ಎನ್ನುವ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ.

ಆ ದಿನ ನಾನು ಚಾಸಃ1 ಮತ್ತು ಇತರ ಜೊತೆ ಸದರಿ ಡಸ್ಟರ್ ವಾಹನದಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ. ಆ ದಿನ ಡಸ್ಟರ್ ವಾಹನವನ್ನು ಚಾಲನೆ ಮಾಡುತ್ತಿದ್ದ ಖಾಸಗಿ ವ್ಯಕ್ತಿಯ ಬಗ್ಗೆ ನಮಗೆ ಯಾವುದೇ ವಿಷಯ ಗೊತ್ತಿಲ್ಲ. ಅದು ಚಾಸಃ1 ಗೆ ಗೊತ್ತಿರುತ್ತದೆ. ಆ ದಿನ ನಾವು ಹೇಳುತ್ತಿರುವಂತೆ ಡಸ್ಟರ್ ವಾಹನದಲ್ಲಿ ಖಾಸಗಿ ವ್ಯಕ್ತಿ ಚಾಲಕನಾಗಿರಲಿಲ್ಲ ನಮ್ಮ ಸಿಬ್ಬಂದಿಯಲ್ಲಿ ಒಬ್ಬರು ಅದನ್ನು ಚಾಲನೆ ಮಾಡಿಕೊಂಡು ಬಂದಿದ್ದರಿಂದ ಖಾಸಗಿ ಚಾಲಕನನ್ನು ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಆ ದಿನ ಚತ್ರದ ಹಳ್ಳಿಗೆ ಬೋರ್ಡ ಇರುವ ಜಾಗಕ್ಕೆ ಬಂದಾಗ ಮದ್ಯಾಹ್ನ 2.45 ಗಂಟೆಯಾಗಿತ್ತು. ನಾವು ನಮ್ಮ ವಾಹನದಲ್ಲಿ ಚತ್ರದಹಳ್ಳಿ ಬೋರ್ಡ ಇದ್ದ ಜಾಗದಲ್ಲಿ ನಿಲ್ಲಿಸಿದ್ದೆವು. ಆ ಸಮಯದಲ್ಲಿ ಮೊದಲು ಚಾಸಃ1 ರವರು

ಮೊದಲು ಆ ವಾಹನದಿಂದ ಇಳಿದಿದ್ದು ಅವರ ಜೊತೆಯಲ್ಲಿ ನಾವು ಸಹ ಹೋಗಿರುತ್ತೇವೆ. ನಾವು ವಾಹನ ನಿಲ್ಲಿಸಿದ್ದ ರಸ್ತೆಯಲ್ಲಿ ಜನರು ಓಡಾಡುತ್ತಿರಲಿಲ್ಲ ಮತ್ತು ವಾಹನಗಳು ಯಾವುದೇ ಸಂಚಾರ ಇರಲಿಲ್ಲ.

ನಿಪಿ-4 ನಕ್ಷೆಯಲ್ಲಿ ನಾನು ಮೇಲೆ ಹೇಳುತ್ತಿರುವ ವಾಹನ ನಿಲ್ಲಿಸಿದ ಜಾಗ ಗುರುತಿಸಿಲ್ಲ ಎಂದರೆ ಸರಿ. ನಾವು ವಾಹನ ನಿಲ್ಲಿಸಿದ ಜಾಗದಿಂದ ಘಟನಾ ಸ್ಥಳಕ್ಕೆ ಸುಮಾರು 100 ರಿಂದ 150 ಮೀಟರ್ ಅಂತರವಿತ್ತು. ಶಿರಾಳಕೊಪ್ಪದಿಂದ ಸೊರಬ ಕ್ಕೆ ಹೋಗುವ ರಸ್ತೆ ಅಂಕುಡೊಂಕಾಗಿದ್ದು ನೇರವಾಗಿಲ್ಲ ಎಂದರೆ ಆ ಸಮಯದಲ್ಲಿ ನಾನು ಗಮನಿಸಿಲ್ಲ, ನಾನು ಪ್ರಥಮವಾಗಿ ಬಂದಿದ್ದರಿಂದ ನನಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿದಿದ್ದಾರೆ. ಸದರಿ ಘಟನಾ ಸ್ಥಳದಲ್ಲಿ ತುಂಬಾ ಪೊದೆಗಳು ಬೆಳೆದಿತ್ತಾ ಎಂದು ನನಗೆ ಈಗ ನೆನಪಿಲ್ಲ. ಆರೋಪಿತರಲ್ಲಿ ಐದರಿಂದ ಸುಮಾರು ಎಂಟು ಜನ ಗುಂಪಾಗಿ ಬಂದಿದ್ದು ಅವರಲ್ಲಿ ಯಾರು ಮೊದಲು ಯಾರು ನಂತರ ಬಂದರು ಎಂದು ನನಗೆ ಹೇಳಲು ಆಗುವುದಿಲ್ಲ.

ನಾವು ಹೇಳುತ್ತಿರುವ ಘಟನಾ ಸ್ಥಳದಲ್ಲಿ ಒಳಗಿದ ಒಂದು ಕೆರೆಯಿದ್ದು ಅದರ ಅಕ್ಕಪಕ್ಕದಲ್ಲಿದ್ದ ಚತ್ರದ ಹಳ್ಳಿ ಗ್ರಾಮ, ತೋಟ ಮತ್ತು ಅದರಲ್ಲಿನ ಮನೆ ಇದೆ ಎಂದರೆ ನನಗೆ ನೆನಪಿಲ್ಲ. ಆ ಸಮಯದಲ್ಲಿ ಯಾವ್ಯಾವ ಆರೋಪಿತರ ಕೈಯಲ್ಲಿ ಯಾವ್ಯಾವ ಆಯುಧಗಳು ಇದ್ದವು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ಚಾಸಃ 1 ರವರು 45 ಡಿಗ್ರಿ ಕೋನದಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿರುತ್ತಾರೆ. ಮು.ಮಾ.1 ನ್ನು ನಾನು ಚಾಸಃ1 ರವರ ಬಳಿ ಸುಮಾರು ಒಂದು ವರ್ಷ ಕೆಲಸ ಮಾಡಿದ್ದು ಅದನ್ನು ನೋಡಿದ್ದರಿಂದ ನಾನು ಅದನ್ನು ಗುರುತಿಸುತ್ತೇನೆ. ಅದರ ನಂಬರ್ ನನಗೆ ನೆನಪಿಲ್ಲ.

ಈ ಘಟನೆಯಲ್ಲಿ ಆರೋಪಿತರು ನನಗೆ ಸುಮಾರು 100 ಅಡಿ ದೂರದಿಂದಹೊಡೆದಿದ್ದು ನನಗೆ ರಕ್ತ ಸ್ರಾವವಾಗುವ ಗಾಯವಾಗಿಲ್ಲ. ನನ್ನ ಬೆನ್ನಿಗೆ ಹೊಡೆದಿದ್ದರಿಂದ ನನಗೆ ರಕ್ತ ಹೆಪ್ಪು ಗಟ್ಟಿತ್ತು. ಮು.ಮಾ.3 ರಿಂದ 6 ಬೇಲಿಗೆ ನೆಡುವ ಗೂಟಗಳು ಎಂದರೆ ಸರಿಯಲ್ಲ.

ಸಾಮಾನ್ಯವಾಗಿ 100 ಅಡಿ ದೂರದಿಂದ ಮು.ಮಾ. 7 ರಿಂದ 10 ಕಲ್ಲಿನಿಂದ ಬೀಸಿ ಹೊಡೆದಲ್ಲಿ ರಕ್ತಸ್ರಾವವಾಗುವ ಗಾಯವಾಗಿ ಮೂಳೆ ಮುರಿಯುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ನಾವು

ಆರೋಪಿಗಳಿಗೆ ನಾವು ಕರ್ತವ್ಯದ ಮೇಲೆ ಇರುವ ಪೋಲಿಸರು ಎಂದು ನಮ್ಮ ಮೇಲೆ ಹಲ್ಲೆ ಮಾಡಬೇಡಿ ಎಂದು ಹೇಳುತ್ತಿದ್ದಾಗ ಆರೋಪಿತರು ನಮ್ಮಿಂದ ಸುಮಾರು 100 ಅಡಿ ಅಂತರದಲ್ಲಿದ್ದರು. ನಮ್ಮ ಸಿಬ್ಬಂದಿಗಳಲ್ಲಿ ಮತ್ತು ಚಾಸಃ1 ಗೆ ರಾಡ್ ನಿಂದ ಏಟು ಬಿದ್ದಿದ್ದತ್ತು ಎಂದು ನನಗೆ ಈಗ ನೆನಪಿಲ್ಲ. ಸಾಮಾನ್ಯವಾಗಿ ಪಿಸ್ತೂಲ್ ನಿಂದಗುಂಡು ಹಾರಿಸಿದರೆ ಅದು ಶಬ್ದ ಬರುತ್ತದೆ ಎಂದರೆ ಸಾಕ್ಷಿ ಅದು ವಿಶಾಲವಾದ ಜಾಗವಾಗಿದ್ದರಿಂದ ಅಲ್ಲಿ ಒಂದು ಪಟಾಕಿ ಹೊಡೆದಷ್ಟು ಶಬ್ದ ಮಾತ್ರ ಬಂದಿದೆ ಎಂದು ನುಡಿದಿದ್ದಾರೆ ಘಟನಾ ಸಮಯದಲ್ಲಿ ಸಾರ್ವಜನಿಕರು ಯಾರು ಬಂದಿರಲಿಲ್ಲ. ನ್ಯಾಯಾಲಯದ ಮುಂದೆ ಚಾಸಃ 1 ರವರು ಐದು ಸುತ್ತು ಗುಂಡುಹಾರಿಸಿದ್ದಾರೆ ಎಂದು ಹೇಳುತ್ತಿದ್ದು ಆದರೆ ಖಾಲಿ ಕೊಳವೆಗಳು ಎರಡು ಮಾತ್ರ ಹಾಜರುಪಡಿಸಲಾಗಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅದು ತನಿಖಾಧಿಕಾರಿಗೆ ಗೊತ್ತಿದೆ ಎಂದು ಸಾಕ್ಷಿ ನುಡಿದಿದ್ದಾರೆ.

ದಿಃ 07-03-2016 ರಂದು ಸೊರಬ ಪೊಲಿಸ್ ಠಾಣೆಗೆ ಬಂದಿದ್ದಾಗ ಪೋಲಿಸರು ಆ ದಿನ ಠಾಣೆಯಲ್ಲಿದ್ದ ಆರೋಪಿತರನ್ನು ಹೆಸರನ್ನು ಹೇಳಿದ್ದಾಗ ಮಾತ್ರ ಆರೋಪಿತರ ಹೆಸರು ನನಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿರುವ ಮು.ಮಾ.12 ಮತ್ತು 14 ರಿಂದ 16 ಸೊರಬ ಠಾಣೆಯ ಕಟ್ಟಡ ಕಾಮಗಾರಿ ಕೆಲಸ ನಡೆಯುತ್ತಿದ್ದು ಅವುಗಳಲ್ಲಿ ತ್ಯಾಜ್ಯವಸ್ತುಗಳಾಗಿದ್ದು ಅವುಗಳು ಈ ಘಟನೆಗೆ ಸಂಬಂಧಿಸಿದೆ ಎಂದು ಹೇಳಿ ಈ ಘಟನೆಯಲ್ಲಿ ಅವುಗಳನ್ನು ಸೇರಿಸಿರುತ್ತೇವೆ ಎನ್ನುವುದು ಸರಿಯಲ್ಲ.

ಮು.ಮಾ. 2 ರ ತರಹ ಚಪ್ಪಲಿಗಳು ಸಾಮಾನ್ಯವಾಗಿ ಯಾರು ಒಂದು ಚಪ್ಪಲಿ ಬಿಟ್ಟು ಒಂದು ಚಪ್ಪಲಿ ಹಾಕಿಕೊಂಡು ಹೋಗುವುದಿಲ್ಲ ಮತ್ತು ಮು.ಮಾ.2 ಕೆರೆ ಅಂಗಳದಲ್ಲಿ ಬಿದ್ದಿದ್ದನ್ನು ನಾನು ಈ ಪ್ರಕರಣದಲ್ಲಿ ಆರೋಪಿತರಿಗೆ ಸಂಬಂಧಿಸಿದ್ದು ಎಂದು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದಾಗ ಆರೋಪಿತರ ಚಹರೆ ಹಾಗೂ ಘಟನೆ ಸಮಯದಲ್ಲಿ ಆರೋಪಿತರು ಧರಿಸಿದ್ದ ಬಟ್ಟೆಗಳ ಬಣ್ಣದ ಬಗ್ಗೆ ನಾನು ಹೇಳಿಕೆ ನೀಡಿದ್ದರ ಬಗ್ಗೆ ನನಗೆ ಈಗ ನೆನಪಿಲ್ಲ. ಈಗ ನಾನು ಸೊರಬ ಠಾಣೆಯಲ್ಲಿ ಕೊಟ್ಟಿರುವ ಹೇಳಿಕೆಯಲ್ಲಿ ಈ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಮು.ಮಾ.3 ರಿಂದ 6 ಮತ್ತು 7 ರಿಂದ 10

ಮತ್ತು 12 ಮತ್ತು 14 ರಿಂದ 16 ಯಾವ್ಯಾವ ಆರೋಪಿತರಲ್ಲಿ ಯಾವ್ಯಾವ ಮು.ಮಾ.ಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಯಾವ ಆರೋಪಿತನ ಕೈಯಲ್ಲಿ ಎರಡು ಆಯುಧಗಳು ಇದ್ದವು ಎಂದರೇ ನನಗೆ ಈಗ ನೆನಪಿಲ್ಲ. ಈ ಘಟನೆಯು ಸುಮಾರು ಮಧ್ಯಾಹ್ನ 3.00 ರಿಂದ 4.30 ಗಂಟೆಯವರೆಗೆ ನಡೆದಿದೆ.

ಆ ದಿನ ನಾವು ಸಾಯಂಕಾಲ 6.00 ರಿಂದ 6.20 ಗಂಟೆ ಸಮಯದಲ್ಲಿ ಶಿರಾಳಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಚಿಕಿತ್ಸೆ ಪಡೆಯುವ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿನ ವೈದ್ಯರಿಗೆ ಘಟನೆ ಬಗ್ಗೆ ಹೇಳಿದ್ದೆ. ನಾವು ಶಿರಾಳಕೊಪ್ಪ ಬಳಿ ಬರುವ ವಿಷಯವನ್ನು ಘಟನಾ ಸ್ಥಳ ತಲುಪುವ ಮೊದಲು ಸೊರಬ ಮತ್ತು ಶಿರಾಳಕೊಪ್ಪ ಠಾಣೆಯವರಿಗೆ ಮಾಹಿತಿ ಇತ್ತಾ ಎಂದರೆ ಅದು ಚಾಸಃ1 ಗೆ ಗೊತ್ತು,. ನನಗೆ ಗೊತ್ತಿಲ್ಲ.

ಚಾಸಃ 6 ಮತ್ತು 7 ಘಟನಾ ಸ್ಥಳದಲ್ಲಿರುವ ರಸ್ತೆಯಲ್ಲಿ ಹೋಗುತ್ತಿದ್ದು ಆನಂತರ ಅಲ್ಲಿಗೆ ಬಂದಿರುತ್ತಾರೆ. ಆಗ ಎಷ್ಟು ಗಂಟೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಹೇಳುತ್ತಿರುವಂತೆ ಚಾಸಃ 6 ಮತ್ತು 7 ಆ ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಚಾಸಃ 1 ರವರು ಚಾಸಃ 6 ಮತ್ತು 7 ರವರ ಬಳಿ ಆರೋಪಿತರು ಘಟನೆ ಸಮಯದಲ್ಲಿ ಹೇಳುತ್ತಿದ್ದ ಹೆಸರನ್ನು ಹೇಳಿದಾಗ ಅವರುಗಳು ಆ ಗ್ರಾಮದವರೇ ಎಂದು ಮತ್ತು ಅವರ ಹೆಸರನ್ನು ಗುರುತಿಸಿರುತ್ತಾರೆ. ಚಾಸಃ 6 ಮತ್ತು 7 ರವರು ಆರೋಪಿತರನ್ನು ಆ ಸಮಯದಲ್ಲಿ ನೋಡಿರಲಿಲ್ಲ.

ದಿಃ 07-03-2016 ರಂದು ಚಾಸಃ1 ರವರ ಜೊತೆಗೆ ನಾನು ಸೊರಬ ಠಾಣೆಯಲ್ಲಿ ಮರುಹೇಳಿಕೆ ಕೊಟ್ಟಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಈಗ ನೆನಪಿಲ್ಲ. ದಿಃ 07-03-2016 ರಂದು ಸೊರಬ ಠಾಣೆಗೆ ಯಾವ ವಾಹನದಲ್ಲಿ ಬಂದಿದ್ದೆವು ಎಂದು ನನಗೆ ಈಗ ನೆನಪಿಲ್ಲ. ಮರುಹೇಳಿಕೆ ಕೊಡುವ ಸಮಯದಲ್ಲಿ ನಾವೆಲ್ಲರೂ ಜೊತೆಗೆ ಬಂದಿದ್ದರು.

ನಾನು ತನಿಖಾಧಿಕಾರಿಯ ಮುಂದೆ ಯಾವುದೇ ಮರುಹೇಳಿಕೆ ನೀಡಿಲ್ಲ ಮತ್ತು ಆರೋಪಿತರನ್ನು ಗುರುತಿಸಿಲ್ಲ ಮತ್ತು ನಾನು ಪೋಲಿಸ್ ಸಿಬ್ಬಂದಿ ಆಗಿರುವುದರಿಂದ ತನಿಖಾಧಿಕಾರಿಯೇ ಹೇಳಿಕೆ ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮು.ಮಾ. 7 ರಿಂದ 10 ಕಾಡು ಜಾತಿಯ ಕಲ್ಲುಗಳ ಅಲ್ಲ ಮತ್ತು

ಅವು ಬೋರ್ಡರ್ ನಿಂದ ಪುಡಿಯಾಗಿರುವ ಕಲ್ಲುಗಳು ಎಂದರೆ ಸರಿಯಲ್ಲ. ಅದೇ ರೀತಿ ಮು.ಮಾ. 3 ರಿಂದ 6 ಕಾಡು ಜಾತಿಯ ದೊಣ್ಣೆ ಅಲ್ಲ ಎಂದರೆ ಸರಿಯಲ್ಲ. ಮು.ಮಾ. 13 ಯಾವ ಆರೋಪಿಗೆ ಸಂಬಂಧಿಸಿದೆ ಎಂದು ದಾಖಲೆ ನೋಡಿ ಪರಿಶೀಲನೆ ಮಾಡಿ ತಿಳಿದುಕೊಂಡಿದ್ದೀರಾ ಎಂದು ಸಾಕ್ಷಿ ತನಗೆ ನೆನಪಿಲ್ಲ ಎಂದು ನುಡಿದಿದ್ದಾರೆ. ಮು.ಮಾ.13 ಸಾಮಾನ್ಯವಾಗಿ ಎಲ್ಲರ ಕೈಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾವು ಮತ್ತು ಸೊರಬ ಠಾಣಯವರು ಸೇರಿ ಮು.ಮಾ.13 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿತರನ್ನು ನಾವು ಸೊರಬ ಠಾಣೆಯಲ್ಲಿ ಗುರುತಿಸುವ ಮೊದಲು ಅವರು ಯಾವಾಗ ಹೇಗೆ ಮತ್ತು ಎಲ್ಲಿ ಸಿಕ್ಕಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಮು.ಮಾ. 12, 14 ರಿಂದದ 16 ರಲ್ಲಿ ಎಲ್ಲಿಯೂ ರಕ್ತದ ಕಲೆ ಎಂದರೆ ಸಾಕ್ಷಿ ನಾವು ಎಲ್ಲಿಯೂ ರಕ್ತ ಸ್ರಾವ ವಾಗುವ ಗಾಯವಾಗಿಲ್ಲ ಎಂದು ಸಾಕ್ಷಿ ನುಡಿದಿದ್ದಾರೆ. ಈ ಘಟನೆಯಲ್ಲಿ ನಾವು ಸಿಬ್ಬಂದಿಯು ಎಲ್ಲರಿಗೂ ಸಾಮಾನ್ಯ ಸ್ವರೂಪದ ಗಾಯವಾಗಿದೆ ಎಂದು ವೈದ್ಯಕೀಯ ಪ್ರಮಾಣಕೊಟ್ಟಿದ್ದಾರೆ ಎಂದರೆ ಸರಿ.

ದಿಃ 29-03-2016 ರಂದು ಸೊರಬ ಠಾಣೆಗೆ ಆರೋಪಿತರನ್ನು ಗುರುತಿಸಲು ಎಷ್ಟು ಸಮಯಕ್ಕೆ ಬಂದಿದ್ದೆವು ಎಂದು ನನಗೆ ಈಗ ಜ್ಞಾಪಕವಿಲ್ಲ. ಆ ದಿನ ಆರೋಪಿತರನ್ನು ಪೋಲಿಸರು ಎಲ್ಲಿ ಯಾವಾಗ ದಸ್ತಗಿರಿ ಮಾಡಿಕೊಂಡು ಬಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿತರಲ್ಲಿ ಇಬ್ಬರಿಂದ ಮೂವರು ಮಾತ್ರ ನನಗೆ ಗುರುತಿಸಲು ಸಾಧ್ಯವಾಗಿರುತ್ತದೆ ನ್ಯಾಯಾಲಯದ ಮುಂದಿರುವ ಆರೋಪಿ ತಮ್ಮಣ್ಣೆಯನ್ನು ಗುರುತಿಸಿರುತ್ತೇನೆ.

ಸೊರಬ ಠಾಣೆಯ ತನಿಖಾಧಿಕಾರಿ ಈತನೇ ತಮ್ಮಣ್ಣ ಆರೋಪಿ ಎಂದು ತೋರಿಸಿದ್ದರಿಂದ ಆತನನ್ನು ಗುರುತು ಹಿಡಿದಿದ್ದು ನಮಗೆ ಆರೋಪಿತರ ಹೆಸರು ಮತ್ತು ಅವರುಗಳನ್ನು ಗುರುತಿಸಲು ನಾನು ಸ್ವತಃ ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 19-06-2016 ರಂದು ಸೊರಬ ಠಾಣೆಗೆ ಎಷ್ಟು ಗಂಟೆಗೆ ಬಂದೆವು ಎಂದು ನನಗೆ ಈಗ ಜ್ಞಾಪಕವಿಲ್ಲ. ನಾನು ದಿಃ 19-06-2016 ರಂದು ಸೊರಬ ಠಾಣೆಗೆ ಬಂದಿಲ್ಲ, ಯಾವುದೇ ಆರೋಪಿತನುನ್ನು ಗುರುತಿಸಿಲ್ಲ ಮತ್ತು ಮರುಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬಿಳುವಾಡಿ ಗ್ರಾಮದ ರೈತರನ್ನು ಕರೆದುಕೊಂಡು ಬಂದು ನಾವು ಈ ಪ್ರಕರಣದಲ್ಲಿ ಪತ್ತೆ ಹಚ್ಚಿದ್ದೇವೆ ಎಂದು ಹೇಳಿ, ಅವರಿಗೆ ಮತ್ತು ಈ ಪ್ರಕರಣದಲ್ಲಿ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಅವರನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ.

ಮೊಕದ್ದಮೆ ಸಂಃ 60/2016 ರಲ್ಲಿನ ಪಿರ್ಯಾದುದಾರ ಮೂಡಿಗೆರೆ ತಾಲ್ಲೂಕಿನ ಪತಿರಕಾ ವರಧಿಗಾರನಾಗಿದ್ದು ಪ್ರಬಾವಶಾಲಿ ವ್ಯಕ್ತಿಯಾಗಿದ್ದರಿಂದ ಅವರ ಪ್ರಕರಣದಲ್ಲಿ ಆರೋತರನ್ನು ಪತ್ತೆಹಚ್ಚಿದರೆ ನಮ್ಮ ಹೆಸರು ದಿನಪತ್ರಿಕೆಯಲ್ಲಿ ಬರುತ್ತದೆ ಎನ್ನುವ ಉದ್ದೇಶದಿಂದ ಆರೋಪಿತರನ್ನು ಪತ್ತೆ ಹಚ್ಚದಿದ್ದರೂ ಸಹ ಪತ್ತೆಹಚ್ಚಿದ್ದೇವೆ ಎಂದು ಹೇಳಿ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ಆರೋಪಿತರು ಯಾರು ಇರಲಿಲ್ಲ ಮತ್ತು ಈ ಘಟನೆಗೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಹೇಳುತ್ತಿರುವ ಘಟನೆಯಲ್ಲಿ ಆರೋಪಿತರು ಇಲ್ಲದೇ ಇದ್ದರಿಂದ ಅವರು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸುವುದಾಗಲಿ ಅಥವಾ ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ಮು.ಮಾ.1 ರಿಂದ 16 ಗೆ ಮತ್ತು ಆರೋಪಿ ಸಂಃ 1 ರಿಂದ 4 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿತರ ಪರ ಶ್ರೀ.ಬಿಕೆವಿ. ವಕೀಲರಿಂದಃ</u>

ನಾನು ವೈದರು ಬಳಿ ಚಿಕಿತ್ಸೆ ಪಡೆದ ಸಮಯದಲ್ಲಿ ಘಟನೆ ಬಗ್ಗೆ ತಿಳಿಸಿದ್ದು ಆ ಸಮಯದಲ್ಲಿ 5 ರಿಂದ 8 ಜನ ಇದ್ದರು ಎಂದು ತಿಳಿಸಿದ್ದೇನೆ. ನಮ್ಮ ಉಳಿದ ಚಾಸಃ 1, 2, 4 ಮತ್ತು 5 ಅದೇ ರೀತಿ ವೈದ್ಯರ ಮುಂದೆ

ಹೇಳಿಕೆ ಕೊಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ. ಈಗ ನನಗೆ ತೋರಿಸಿದ ಗಾಯದ ಪ್ರಮಾಣ ಪತ್ರ ನನಗೆ ಸಂಬಂಧಿಸಿದ್ದು ಆಗಿದ್ದು ಅದರಲ್ಲಿ ಬರೆದ ಘಟನಾ ವಿವರದಲ್ಲಿ 16 ರಿಂದ 20 ಜನ ಆರೋಪಿಗಳು ಎಂದು ಬರೆದಿರುತ್ತಾರೆ ಎಂದರೆ ಬರೆದಿರುತ್ತಾರೆ ಎಂದು ನುಡಿದಿದ್ದಾರೆ. ಈಗ ನಾನು ಘಟನೆ ಸಮಯದಲ್ಲಿ 5 ರಿಂದ 8 ಜನ ಆರೋಪಿತರು ಇದ್ದರು ಎಂದು ಹೇಳಿದ್ದು ಸರಿ ಇದ್ದು, ವೈದ್ಯಕೀಯ ಪ್ರಮಾಣಪತ್ರದಲ್ಲಿ 16 ರಿಂದ 20 ಎಂದು ಬರೆದಿರುವುದು ಸರಿಯಲ್ಲ.

ನಾನು ಸೊರಬ ಠಾಣೆಗೆ ಪಿರ್ಯಾದು ಕೊಡುವ ದಿನ ಮತ್ತು ಮರುಹೇಳಿಕೆ ಕೊಟ್ಟ ಸಮಯದಲ್ಲಿ ಸುಮಾರು 4 ಬಾರಿ ಹೋಗಿದ್ದೇನೆ. ಮೊದಲನೇ ಬಾರಿ ಹೋದಾಗ ಘಟನಾ ಸಮಯದಲ್ಲಿ ತೆಗೆದುಕೊಂಡು ಹೋದ ಡಸ್ಟರ್ ವಾಹನದಲ್ಲಿ ಹೋಗಿದ್ದೆವು. ನಂತರ 2, 3 ಮತ್ತು 4 ನೇ ಬಾರಿ ಯಾವ್ಯಾವ ವಾಹನದಲ್ಲಿ ಹೋಗಿದ್ದೆವು ಎಂದು ನನಗೆ ನೆನಪಿಲ್ಲ. 2 ರಿಂದ 4 ನೇ ಬಾರಿ ಸೊರಬ ಠಾಣೆಗೆ ನಾವು ಐದು ಜನ ಒಟ್ಟಾಗಿಯೇ ಹೋಗಿದ್ದೆವು. ಆಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ. ಅದೇ ರೀತಿ ಆ 2 ರಿಂದ 4 ನೇ ಬಾರಿ ಸೊರಬ ಠಾಣೆಗೆ ಬರುವಾಗ ಅಜ್ಜಂಪುರ ಠಾಣೆಯನ್ನು ಎಷ್ಟು ಗಂಟೆಗೆ ಬಿಟ್ಟಿದ್ದೆವು ಎಂದು ನನಗೆ ನೆನಪಿಲ್ಲ.

ಮು.ಮಾ. 1 ರಿಂದ 16 ರಲ್ಲಿ ಯಾವುದೇ ಪಂಚ ಸಾಕ್ಷಿಗಳ ಸಹಿ ಇಲ್ಲ ಎಂದರೆ ಸರಿಯಲ್ಲ. ಮು.ಮಾ.12, 14 ರಿಂದ 16 ನ್ನು ಈಗ ನಾನು ನೋಡುತ್ತಿದ್ದು ಅವುಗಳ ಪಂಚ ಸಾಕ್ಷಿಗಳ ಸಹಿ ಇಲ್ಲ ಎಂದರೆ ಸರಿ. ನಾನು ಮರುಹೇಳಿಕೆ ಕೊಟ್ಟ ಸಮಯದಲ್ಲಿ ಸಹಿ ಮಾಡಿಲ್ಲ. ಆರೋಪಿತರಿಗೆ ಮತ್ತು ಮು.ಮಾ.1 ರಿಂದ 16 ಗೆ ಯಾವುದೇ ಸಂಬಂಧವಿಲ್ಲ ಮತ್ತು ನಾನು ಸೊರಬ ಠಾಣೆಯಲ್ಲಿ ಯಾವಾಗಲೂ ಹೋಗಿ ಮರುಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಮ್ಮ ಠಾಣೆಯ ಪಿಎಸ್ಐ. ರವರು ಮೊಕದ್ದಮೆ ಸಂಃ 60/2016 ರಲ್ಲಿ ಚಾಸಃ1 ರ ಜೊತೆ ಕರ್ತವ್ಯಕ್ಕೆ ನೇಮಿಸಿರುವ ಬಗ್ಗೆ ಠಾಣೆಯ ಡೈರಿಯಲ್ಲಿ ನೊಂದಣಿ ಮಾಡಿಕೊಂಡಿರುತ್ತಾರೆ. ಆದರೆ ಅದರ ಬಗ್ಗೆ ನನಗೆ ನೆನಪಿಲ್ಲ.

ಮು.ಮಾ.1 ರಲ್ಲಿ 10 ಗುಂಡುಗಳನ್ನು ತುಂಬಿಸಬಹುದಾಗಿದ್ದು, ಅದರಲ್ಲಿ 5 ಗುಂಡುಗಳನ್ನು ಚಾಸಾ1 ರವರು ಆ ದಿನ ಗಾಳಿಯಲ್ಲಿ ಹಾರಿಸಿದ್ದಾರೆ. ಮು.ಮಾ.1 ರಲ್ಲಿ ಉಳಿದಿದ್ದ ಗುಂಡುಗಳು ಎಷ್ಟು ಎಂದು ನನಗೆ ಗೊತ್ತಿಲ್ಲ. ಅದು ಚಾಸಾ1 ಗೆ ಗೊತ್ತಿರುತ್ತದೆ. ಘಟನೆಯಾದ ನಂತರ ನಾವು ಮಾರನೇ ದಿನ ಮಹಜರ್ ಮುಗಿದ ನಂತರ ನಮ್ಮ ನಮ್ಮ ಠಾಣೆಗೆ ಹೋಗಿದ್ದೆವು. ಮಹಜರ್ ಸಮಯದಲ್ಲಿ ನಾನು ಹಾಜರಿದ್ದು, ಅದಕ್ಕೆ ಸಹಿ ಮಾಡಿದ್ದೆನಾ ಎಂದು ನನಗೆ ಈಗ ನೆನಪಿಲ್ಲ. ಸದರಿ ಮಹಜರ್ ಗೆ ಎಷ್ಟು ಜನ ಸಹಿ ಮಾಡಿದ್ದಾರೆಂದು ನನಗೆ ಈಗ ನೆನಪಿಲ್ಲ. ಆ ದರೆ ಆ ಸಮಯದಲ್ಲಿ 3 ಜನ ಸಾಕ್ಷಿಗಳು ಇದ್ದುದನ್ನು ನೋಡಿರುತ್ತೇನೆ. ಸದರಿ ಮಹಜರ್ ನ್ನು ಬೆಳಿಗ್ಗೆ 9.00 ಗಂಟೆ ಯಿಂದ 10.15 ಗಂಟೆಯವರೆಗೆ ಮಾಡಿರುತ್ತಾರೆ. ಆ ಮಹಜರ್ ಗೆ ಮೊದಲು ಯಾರು ಸಹಿ ಮಾಡಿದ್ದಾರೆಂದು ನನಗೆ ನೆನಪಿಲ್ಲ. ತನಿಖಾಧಿಕಾರಿಯು ಮಹಜರ್ ನ್ನು ಬರೆದಿರುತ್ತಾರೆ. ಮಹಜರ್ ನ್ನು ಬರೆಯಲು ಲಕ್ಷ್ಮಣಪ್ಪ, ರಾಮಚಂದ್ರ ಮತ್ತು ನಿಂಗಪ್ಪ ಎನ್ನುವವರು ಮಾಹಿತಿ ನೀಡಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ಎಷ್ಟು ಮಹಜರ್ ಬರೆದಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಸ್ಥಳ ಮಹಜರ್ ಬರೆಯುವ ಮೊದಲು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಬೇರೆ ಯಾವುದಾದರೂ ಮಹಜರ್ ಬರೆದಿದ್ದರಾ ಎಂದು ನನಗೆ ನೆನಪಿಲ್ಲ.

ಘಟನೆಯಾದ ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಮಾರನೇ ದಿನದವರೆಗೂ ನಾವು ಚಾಸಾ1 ರ ಜೊತೆ ಇದ್ದೆವು. ನಾನು ಹೇಳುವಂತೆ ಜೊತೆಯಲ್ಲಿ ಇರಲಿಲ್ಲ, ಜೊತೆಯಲ್ಲಿ ಇದಿದ್ದರೇ ನನಗೆ ನಿಜ ಸಂಗತಿ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಮಾಡಿದ ಸಮಯದಲ್ಲಿ ನಾವು ಐದು ಜನ ಹೊರತು ಪಡಿಸಿ, ಸೊರಬ ಪೋಲಿಸ್ ಠಾಣೆಯ ಸಿಬ್ಬಂದಿಗಳು ಮತ್ತು ಪಂಚ ಸಾಕ್ಷಿಗಳು ಇದ್ದರು. ನಿಪಿ-4 ನ್ನು ನನ್ನ ಸಮಕ್ಷಯ ತಯಾರಿಸಿದ್ದಾರಾ ಎಂದರೆ ನನಗೆ ಈಗ ನೆನಪಿಲ್ಲ. ನಾನು ಆ ಸ್ಥಳದಲ್ಲಿ ಇಲ್ಲದೇ ಇದ್ದುರಿಂದ ನನಗೆ ನಿಪಿ-4 ನ್ನು ತಯಾರಿಸಿದಾಗ ನನಗೆ ನೆನಪಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸೊರಬ ಠಾಣೆಗೆಹೋಗಿಲ್ಲ ಮತ್ತು ಆರೋಪಿತರನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ.

ಆರೋಪಿತರಿಗೆ ಮು.ಮಾ.ಗೆ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಪಾಟೀ ಸವಾಲನ್ನು ಶ್ರೀ. ಕೆ.ಕೆ.ಎಸ್. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ. )

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **05**
ಸಿಡಬ್ಲೂ **09**

| | | |
|---|---|---|
| ಸಾಕ್ಷಿ ಹೆಸರು | - | ಡಾಃ ಮಂಜುನಾಥ ಎ.ಜಿ. |
| ತಂದೆ ಹೆಸರು | - | ಗದಿಗೆಪ್ಪ |
| ವಯಸ್ಸು | - | **27** ವರ್ಷ |
| ಉದ್ಯೋಗ | - | ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ, ಶಿರಾಳಕೊಪ್ಪ |
| ವಿಳಾಸಃ | - | ಶಿರಾಳಕೊಪ್ಪ |

ಪ್ರಮಾಣ ವಚನ ಭೋದಿಸಿದ ದಿನಾಂಕಃ **28-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಕಳೆದ ನಾಲ್ಕು ವರ್ಷಗಳಿಂದ ವೈದ್ಯಾಧಿಕಾರಿಯಾಗಿ ಸರ್ಕಾರಿ ಆಸ್ಪತ್ರೆ, ಶಿರಾಳಕೊಪ್ಪದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ **01-03-2016** ರಂದು ಸಾಯಂಕಾಲ **6.20** ಗಂಟೆ ಸಮಯದಲ್ಲಿ ಸಚಿನ್ ಕುಮಾರ್, **36** ವರ್ಷ, ಇವರು ತಮ್ಮ ಮೇಲೆ **16** ರಿಂದ **20** ಜನ ವ್ಯಕ್ತಿಗಳಿಂದ ಹಲ್ಲೆಯಾಗಿದೆ ಮದ್ಯಾಹ್ನ **3.30** ರಿಂದ **4.30** ಗಂಟೆ ಸಮಯದಲ್ಲಿ ಚತ್ರದಹಳ್ಳಿ ಕ್ರಾಸ್ ಬಳಿ ಹಲ್ಲೆಯಾಗಿದೆ ಎಂದು ತಿಳಿಸಿರುತ್ತಾರೆ. ನಾನು ಆತನನ್ನು ಪರೀಕ್ಷಿಸಿದಾಗ, ಅವರ ಮೈಮೇಲೆ ಯಾವುದೇ ಗಾಯಗಳಾಗಿಲ್ಲ, ಅವರು ಎದೆನೋವು ಮತ್ತು ಬೆನ್ನುನೋವು ಎಂದು ತಿಳಿಸಿರುತಾರೆ. ನನ್ನ ಅಭಿಪ್ರಾಯದಂತೆ ಸದರಿ ವ್ಯಕ್ತಿಗೆ ಆದ ಗಾಯಗಳು ಸಾದಾ ಸ್ವರೂಪದ ಗಾಯ ಎಂದು ಅಭಿಪ್ರಾಯಪಟ್ಟು ಅವರಿಗೆ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣಪತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ಅ ನನ್ನ ಸಹಿ.

ಅದೇ ದಿನ ಅದೇ ಸಮಯದಲ್ಲಿ ಅದೇ ಘಟನೆಯ ಹಿನ್ನಲೆಯಲ್ಲಿ ಚಾಸಃ **2** ಶೇಷಾದ್ರಿ, **36** ವರ್ಷ ವಯಸ್ಸಿನ ವ್ಯಕ್ತಿಯನ್ನು ಪರೀಕ್ಷಿಸಿದ್ದು ಈ ಕೆಳಕಂಡ ಗಾಯಗಳನ್ನು ಕಂಡುಹಿಡಿದಿರುತ್ತೇನೆ.

1. ಎಡ ತೋಳಿನ ಮೇಲೆ ತರಚಿದ ಗಾಯಗಳು.

2. ಬಲಗೈ ಹೆಬ್ಬೆರಳು ಮತ್ತು ಮಣಿಕಟ್ಟಿನಲ್ಲಿ ಊತ ಮತ್ತು ನೋವು ಇತ್ತು.

ನನ್ನ ಅಭಿಪ್ರಾಯದಂತೆ ಸದರಿ ವ್ಯಕ್ತಿಗೆ ಆದ ಗಾಯಗಳು ಸಾದಾ ಸ್ವರುಪದ ಗಾಯ ಎಂದು ಅಭಿಪ್ರಾಯಪಟ್ಟು ಅವರಿಗೆ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣಪತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು. ನಿಪಿ-8 ಅ ನನ್ನ ಸಹಿ.

ಅದೇ ದಿನ ಅದೇ ಸಮಯದಲ್ಲಿ ಅದೇ ಘಟನೆಯ ಹಿನ್ನೆಲೆಯಲ್ಲಿ ಚಾಸಃ 3 ರಿಯಾಜ್ ಹೆಚ್.ಪಿ., 30 ವರ್ಷ ವಯಸ್ಸಿನ ವ್ಯಕ್ತಿಯನ್ನು ಪರೀಕ್ಷಿಸಿದ್ದು ಈ ಕೆಳಕಂಡ ಗಾಯಗಳನ್ನು ಕಂಡುಹಿಡಿದಿರುತ್ತೇನೆ.

1. ಬಲಭಾಗದ ಭುಜದ ಕೆಳಭಾಗದಲ್ಲಿ ಮತ್ತು ಬೆನ್ನಿನ ಮೇಲೆ ತರಚಿದ ಗಾಯಗಳು.

2. ಬಲಗೈ ಮಧ್ಯದ ಬೆರಳಿನಲ್ಲಿ ಊತ ಮತ್ತು ನೋವು ಇತ್ತು.

ನನ್ನ ಅಭಿಪ್ರಾಯದಂತೆ ಸದರಿ ವ್ಯಕ್ತಿಗೆ ಆದ ಗಾಯಗಳು ಸಾದಾ ಸ್ವರುಪದ ಗಾಯ ಎಂದು ಅಭಿಪ್ರಾಯಪಟ್ಟು ಅವರಿಗೆ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣಪತ್ರವನ್ನು ನಿಪಿ-9 ಎಂದು ಗುರುತಿಸಲಾಯಿತು. ನಿಪಿ-9 ಅ ನನ್ನ ಸಹಿ.

ಅದೇ ದಿನ ಅದೇ ಸಮಯದಲ್ಲಿ ಅದೇ ಘಟನೆಯ ಹಿನ್ನೆಲೆಯಲ್ಲಿ ಚಾಸಃ 4 ನವೀನ್ ಕುಮಾರ್, 26 ವರ್ಷ ವಯಸ್ಸಿನ ವ್ಯಕ್ತಿಯನ್ನು ಪರೀಕ್ಷಿಸಿದ್ದು ಈ ಕೆಳಕಂಡ ಗಾಯಗಳನ್ನು ಕಂಡುಹಿಡಿದಿರುತ್ತೇನೆ.

1. ಬಲಕಾಲಿನ ಮೇಲೆ ಊತ ಮತ್ತು ನೋವು ಇತ್ತು.

2. ಎರಡೂ ಕಾಲುಗಳಲ್ಲಿ ತರಚಿದ ಗಾಯಗಳಾಗಿದ್ದವು.

ನನ್ನ ಅಭಿಪ್ರಾಯದಂತೆ ಸದರಿ ವ್ಯಕ್ತಿಗೆ ಆದ ಗಾಯಗಳು ಸಾದಾ ಸ್ವರುಪದ ಗಾಯ ಎಂದು ಅಭಿಪ್ರಾಯಪಟ್ಟು ಅವರಿಗೆ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣಪತ್ರವನ್ನು ನಿಪಿ-10 ಎಂದು ಗುರುತಿಸಲಾಯಿತು. ನಿಪಿ-10 ಅ ನನ್ನ ಸಹಿ.

ಅದೇ ದಿನ ಅದೇ ಸಮಯದಲ್ಲಿ ಅದೇ ಘಟನೆಯ ಹಿನ್ನೆಲೆಯಲ್ಲಿ ಚಾಸಃ **5** ಬಸವರಾಜ ಕೆ.ಹೆಚ್, **36** ವರ್ಷವಯಸ್ಸಿನ ವ್ಯಕ್ತಿಯನ್ನು ಪರೀಕ್ಷಿಸಿದ್ದು ಈ ಕೆಳಕಂಡ ಗಾಯಗಳನ್ನು ಕಂಡುಹಿಡಿದಿರುತ್ತೇನೆ.

**1.** ಬಲಗೈ, ಬಲಕಾಲು, ಕುತ್ತಿಗೆ ಮತ್ತು ಬೆನ್ನಿನ ಮೇಲೆ ನೋವು ಇತ್ತು.

ನನ್ನ ಅಭಿಪ್ರಾಯದಂತೆ ಸದರಿ ವ್ಯಕ್ತಿಗೆ ಆದ ಗಾಯಗಳು ಸಾದಾ ಸ್ವರುಪದ ಗಾಯ ಎಂದು ಅಭಿಪ್ರಾಯಪಟ್ಟು ಅವರಿಗೆ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣಪತ್ರವನ್ನು ನಿಪಿ-**11** ಎಂದು ಗುರುತಿಸಲಾಯಿತು. ನಿಪಿ–**11** ಅ ನನ್ನ ಸಹಿ.

ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ಮು.ಮಾ. 3 ರಿಂದ 10, 12, 14 ರಿಂದ 16 ರಿಂದ ಹಲ್ಲೆ ಮಾಡಿದ್ದಲ್ಲಿ ನಿಪಿ-7 ರಿಂದ 11 ರಲ್ಲಿ ಕಂಡು ಬಂದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

<u>ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ.ಕೆಕೆಎಸ್. ವಕೀಲರಿಂದಃ</u>

ಸಾಮಾನ್ಯವಾಗಿ ನಮ್ಮ ಆಸ್ಪತ್ರೆಗೆ ಯಾವುದಾದರೂ ಘಟನೆಯಿಂದ ಆದ ಗಾಯಗಳಿಗೆ ಚಿಕಿತ್ಸೆ ಪಡೆಯಲು ಬಂದಾಗ ಆ ವ್ಯಕ್ತಿಯ ಘಟನೆ ಬಗ್ಗೆ ಹೇಳಿದ ವಿಷಯವನ್ನು ಬರೆದುಕೊಳ್ಳುತ್ತೇವೆ. ನಾವು ಪ್ರತಿಯೊಬ್ಬ ಗಾಯಾಳುವನ್ನು ಪ್ರತ್ಯೇಕವಾಗಿ ನೋಡುತ್ತೇವೆ.

ಒಬ್ಬ ವ್ಯಕ್ತಿ ಕೆರೆಯ ಏರಿಯಿಂದ ಕೆಳಗೆ ಜಾರಿಬಿದ್ದಾಗ ಚಾಸಃ1 ಗೆ ಆಗಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ಯಾವುದಾದರೂ ವ್ಯಕ್ತಿ ಕೆರೆಯ ಬಳಿ ಇರುವ ಪೊದೆ ಮಧ್ಯೆ ನಡೆದುಕೊಂಡು ಹೋಗುವಾಗ ಈ ರೀತಿ ತರಚಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ಯಾವುದಾದರೂ ವ್ಯಕ್ತಿ ಇಳಿಜಾರು ಇರುವ ಪ್ರದೇಶದಲ್ಲಿ ಬಿದ್ದು ಕೈ ಯನ್ನು ನೆಲದ ಮೇಲೆ ಊರಿದರೆ ಚಾಸಃ 2 ರವರಿಗೆ ಆದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಒಬ್ಬ ವ್ಯಕ್ತಿ ಒಣಗಿದ ಕೆರೆಯ ಏರಿಯ ಮೇಲಿಂದ ಜಾರಿ ಬಿದ್ದಾಗ ಚಾಸಃ3 ಗೆ ಆದ ಗಾಯಗಳು ಆಗುವ ಸಾಧ್ಯತೆ ಇದೆ. ಯಾವುದಾದರೂ ಒಬ್ಬ ವ್ಯಕ್ತಿ ಒಣಗಿದ ಕೆರೆಯಲ್ಲಿ ಬೆಳೆದಿರುವ ಪೊದೆಯಲ್ಲಿ ನಡೆದುಕೊಂಡು ಹೋದಾಗ ಚಾಸಃ 4 ಗೆ ಆದ ಗಾಯಗಳು ಆಗುವ ಸಾಧ್ಯತೆ ಇದೆ.

ಯಾವುದಾದರೂ ಒಬ್ಬ ವ್ಯಕ್ತಿ ಒತ್ತಡದಲ್ಲಿದ್ದು ಅವಸರವಸರವಾಗಿ ಓಡುವಾಗ ಜಾರಿಬಿದ್ದರೆ ಚಾಸಃ 5 ಗೆ ಆದ ಗಾಯಗಳು ಆಗುವ ಸಾಧ್ಯತೆ ಇದೆ. ಮು.ಮಾ. 7 ರಿಂದ 10 ರಂತಹ ಕಲ್ಲುಗಳಿಂದ 100 ಮೀಟರ್ ದೂರದಿಂದ ಯಾವುದಾದರೂ ವ್ಯಕ್ತಿಗೆ ಜೋರಾಗಿ ಬೀಸಿ ಹೊಡೆದಾಗ ರಕ್ತಸ್ರಾವವಾಗಿ ಆ ಭಾಗದ ಮೂಳೆ ಮುರಿತವಾಗುತ್ತದೆ ಎಂದರೆ ನಿಜ. ಈಗ ನನಗೆ ತೋರಿಸಿದ ಮು.ಮಾ.12, 14 ರಿಂದ 16 ರಿಂದ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಹೊಡೆದರೆ ಆತನಿಗೆ ಜೀವಹಾನಿ ಉಂಟಾಗುವ ಸಾಧ್ಯತೆ ಇದೆ ಎಂದರೆ ನಿಜ. ಆ ದಿನ ಐದು ಜನ ಗಾಯಾಳು ಬಂದಿದ್ದು ಎಲ್ಲರೂ ಸಹ ಒಂದೇ ಘಟನೆಯ ಹಿನ್ನೆಲೆಯಲ್ಲಿ ಬಂದಿದ್ದು, ಅವರನ್ನು ನಾನು ಪರೀಕ್ಷಿಸಿ ನಿಪಿ-7 ರಿಂದ 11 ರಂತೆ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 5 ರಿಂದ 7 ನೇ ಆರೋಪಿತರ ಪರ ಶ್ರೀ.ಬಿಕೆವಿ. ವಕೀಲರಿಂದಃ**

ಯಾವುದಾದರೂ ವ್ಯಕ್ತಿ ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಬಂದಾಗ, ನಾವು ಅವರನ್ನು ಪರೀಕ್ಷಿಸಿ, ನಂತರ ಅದನ್ನು ಪೋಲಿಸರಿಗೆ ಮಾಹಿತಿ ನೀಡಿರುತ್ತೇನೆ. ಈ ಪ್ರಕರಣದಲ್ಲಿ ನಾನು ಈ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಿರುತ್ತೇನೆ. ಈ ಪ್ರಕರಣದಲ್ಲಿ ಆ ದಿನ ಎಷ್ಟು ಸಮಯಕ್ಕೆ ಪೋಲಿಸರು ಬಂದು ಹೆಚ್.ಎಂ.ಆರ್. ತೆಗೆದುಕೊಂಡು ಹೋಗಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಐದು ಜನ ಗಾಯಾಳುವಿನೊಂದಿಗೆ ಒಬ್ಬರು ಪಿಎಸ್ಐ. ಅಣ್ಣಯ್ಯ ಮತ್ತು ಅವರ ಜೊತೆ ಇನ್ನಿಬ್ಬರು ಜೊತೆಯಲ್ಲಿ ಬಂದಿದ್ದರು.

ನನಗೆ ಪ್ರತಿದಿನ ಕೆಲಸದ ವೇಳೆ ಸಂಜೆ 4.30 ಕ್ಕೆ ಮುಗಿಯುತ್ತದೆ. ಯಾವುದಾದರೂ ತುರ್ತು ಪ್ರಕರಣದ ರೋಗಿಗಳು ಬಂದಾಗ ಮಾತ್ರ ನಾವು ನಮ್ಮ ಕರ್ತವ್ಯದ ಅವಧಿಯನ್ನು ಮುಂದುವರಿಸುತ್ತೇವೆ ಆ

ದಿನ ನನ್ನ ಕೆಲಸದ ವೇಳೆ ಸಂಜೆ 4.30 ಕೆಕ್ಕ ಮುಗಿದ್ದಿರೂ ಸಹ ನಾನು ಯಾವುದೇ ತುರ್ತು ನಿಗಾವಣೆ ಘಟಕದಲ್ಲಿ ರೋಗಿಯನ್ನು ನೋಡಿಕೊಳ್ಳುತ್ತಿದ್ದರಿಂದನಾನು ಸಂಜೆ 6.30 ಗಂಟೆಯಾದರೂ ಸಹ ಆಸ್ಪತ್ರೆಯಲ್ಲಿದ್ದೆ. ನಿಪಿ-7 ರಿಂದ 11 ರಲ್ಲಿ ತೋರಿಸಿದ ಗಾಯಗಳಾದ ಸಂದರ್ಭದಲ್ಲಿ ತನಿಖಾಧಿಕಾರಿ ನಮ್ಮ ಅಭಿಪ್ರಾಯ ಪಡೆಯುತ್ತಾರೆ ಎಂದರೆ ಪಡೆದಿಲ್ಲ ಎಂದು ಸಾಕ್ಷಿ ನುಡಿದಿದ್ದಾರೆ. ರೋಗಿಗಳು ಕೋರಿದಾಗ ಮಾತ್ರ ನಾವು ಗಾಯದಪ್ರಮಾಣಪತ್ರನ್ನು ಕೊಡುತ್ತೇವೆ ಅದನ್ನು ನಾವು ಮೊದಲೇ ತಯಾರು ಮಾಡಿಟ್ಟುಕೊಂಡಿರುವುದಿಲ್ಲ.

(ಉಳಿದ ಪಾಟೀ ಸವಾಲನ್ನು ಶ್ರೀ. ಕೆ.ಕೆ.ಎಸ್. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ. )

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **06**
ಸಿಡಬ್ಲೂ **05**

| | | |
|---|---|---|
| ಸಾಕ್ಷಿ ಹೆಸರು | – | ಬಸವರಾಜ ಕೆ.ಹೆಚ್. |
| ತಂದೆ ಹೆಸರು | – | ಹರಳೆಗೌಡ |
| ವಯಸ್ಸು | – | **36** ವರ್ಷ |
| ಉದ್ಯೋಗ | – | ಪೊಲೀಸ್ ಕಾನ್ಸ್ ಟೇಬಲ್, ಆರ್.ಡಿ.ಸಿ. ಶಾಖೆ, ಡಿಪಿಓ. |
| ವಿಳಾಸಃ | – | ಚಿಕ್ಕಮಗಳೂರು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **28-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಕಳೆದ ಏಳು ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯ ಪೊಲೀಸ್ ಕಾನ್ಸ್ ಟೇಬಲ್ ಆಗಿ ಆರ್.ಡಿ.ಸಿ. ಶಾಖೆ, ಡಿಪಿಓ.ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ **01-03-2016** ರಂದು ನನಗೆ ಮತ್ತು ಚಾಸಃ **2** ಶೇಷಾದ್ರಿ ರವರಿಗೆ ಚಾಸಃ **1** ರವರು ಚಿಕ್ಕಮಗಳೂರು ಜಿಲ್ಲೆ ಬಸವನಹಳ್ಳಿ ಠಾಣೆಯ ಮೊಕದ್ದಮೆ ಸಂಃ **60/2016** ರ ಕಲಂಃ **420** ಭಾ.ದಂ.ಸಂ. ಹಾಗೂ ಮಾನ್ಯ ಎಸ್.ಪಿ.ಯವರ ಕಛೇರಿಯಲ್ಲಿ ಆರ್.ಡಿ.ಸಿ. ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ **2** ಇವರೊಂದಿಗೆ ಸದರಿ ಮೊಕದ್ದಮೆಯ ಆರೋಪಿತರ ಪತ್ತೆಗಾಗಿ ನೇಮಕಮಾಡಿದ್ದು, ನಾವು ಅಜ್ಜಂಪುರ ಠಾಣೆಗೆ ಬಂದು ಅಲ್ಲಿ ಚಾಸಃ **3** ಮತ್ತು **4, 1** ರವರ ಜೊತೆ ಅದರಂತೆ ನಾವು ಒಂದು ಖಾಸಗಿ ಡಸ್ಟರ್ ವಾಹನ ಸಂಃ ಕೆಎ-**18**/ಪಿ-**1439** ರಲ್ಲಿ ಖಾಸಗಿ ವಾಹನದ ಚಾಲಕ ಸೇರಿ **6** ಜನರು **10.00** ಗಂಟೆಯಿಂದ ಅಜ್ಜಂಪುರ ಠಾಣೆಯಿಂದ ಹೊರಟೆವು.

ಮೊಕದ್ದಮೊ ಸಂಃ **60/2016** ರ ಪಿರ್ಯಾದಿಯ ಮೊಬೈಲ್ ನಂಃ **9448211028** ರಿಂದ ಆರೋಪಿತರ ಮೊಬೈಲ್ ಸಂಃ **9916040036** ಗೆ ಕರೆ ಮಾಡುತ್ತಾ ಹೆಚ್ಚಿನದಾಗಿ ಚಿನ್ನ ಕೊಳ್ಳುವುದಾಗಿ

ಅವರಿಗೆ ನಂಬಿಕೆ ಬರುವಂತೆ ಮಾತನಾಡುತ್ತಾ ಬರುತ್ತಿರುವಾಗ ಆರೋಪಿತರು ಮೊದಲು ನಮಗೆ ಹಿರೆಕೆರೂರಿಗೆ ಬರಲು ತಿಳಿಸಿದ್ದು, ನಂತರ ಶಿರಾಳಕೊಪ್ಪಕ್ಕೆ ಬರಲು ತಿಳಿಸಿರುತ್ತಾರೆ. ನಾವು ಶಿರಾಳಕೊಪ್ಪಕ್ಕೆ ಬಂದು ಆರೋಪಿತರ ಮೊಬೈಲ್‌ಗೆ ಕರೆ ಮಾಡಿದಾಗ ಆರೋಪಿತರು ಶಿರಾಳಕೊಪ್ಪದಿಂದ ಸೊರಬ ಮುಖ್ಯರಸ್ತೆಯ ಹತ್ತಿರ ಒಂದು ಕೆರೆ ಇದೆ ಅಲ್ಲಿಗೆ ಬನ್ನಿ ಎಂದು ಹೇಳಿದರು.  ನಾವು ಸದರಿ ಸ್ಥಳಕ್ಕೆ ಹೋದಾಗ ಚತ್ರದಹಳ್ಳಿ ಎಂಬ ಬೊರ್ಡ ಇತ್ತು ಅಲ್ಲಿಂದ ಸುಮಾರು 100 ಮೀಟರ್ ಕೆರೆಯ ಒಳಗಡೆ ಇಳಿದು ಹೋಗಿ ಹುಡುಕುತ್ತಿದ್ದಾಗ ಸುಮಾರು 5 ರಿಂದ 8 ಜನರು ಇದ್ದ ಗುಂಪು ಪೊದೆಯಿಂದ ಏಕಾಏಕಿ ಹೊರಬಂದು ಪೋನ್ ಮಾಡಿದ್ದು ನಾವೇ ಎಂದು ಸನ್ನೆ ಮೂಲಕ ತಿಳಿಸಿದರು. ನಾವು ಅವರ ಬಳಿ ಹೋಗುತ್ತಿದ್ದಂತೆ ಅವರಿಗೆ ನಾವು ಪೋಲಿಸರು ಎಂದು ತಿಳಿದು ಅಲ್ಲಿಯೇ ಬಿದ್ದಿದ್ದ ಕಲ್ಲುಗಳಿಂದ ಸುತ್ತುವರಿದು ಹೊಡೆಯಲು ಪ್ರಾರಂಭಿಸಿದರು.

ಆಗ ನಾವು ಕರ್ತವ್ಯದ ಮೇಲೆ ಬಂದ ಪೋಲಿಸರು ಎಂದು ಹೇಳಿದಾಗಲೂ ಬಿಡಬೇಡಿ ಇವರನ್ನು ಹೊಡೆಯಿರಿ, ಇವರಲ್ಲಿ ಯಾರಿಗಾದರೂ ಒಬ್ಬನಿಗೆ ತೆಗೆದರೆ ಬುದ್ದಿ ಬರುವುದು ಹೇಳಿ, ಅಲ್ಲಿಯೇ ಬಿದ್ದಿದ್ದ ಕಲ್ಲುಗಳು ಹಾಗೂ ಅಲ್ಲಿ ಪೊದೆಯಲ್ಲಿ ಬೆಳೆದಿದ್ದ ದೊಣ್ಣೆಗಳಿಂದ, ಕೆಲವರ ಕಬ್ಬಿಣದ ರಾಡಿನಿಂದ ಬೀಸಿ ಹೊಡೆಯಲು ಪ್ರಾರಂಭಿ, ಹಲ್ಲೆಗೆ ಯತ್ನಿಸಿದರು. ಆಗ ಚಾಸಃ1 ರವರು ನಮ್ಮ ರಕ್ಷಣೆಗೆ ಪಿಸ್ತೂಲಿನಿಂದ ಗಾಳಿಯಲ್ಲಿ ಮೇಲಕ್ಕೆ ಒಂದು ಗುಂಡು ಹಾರಿಸಿದರು. ಆದರೂ ಸಹ ಆರೋಪಿತರು ಮುಂದುವರಿದು ನಮ್ಮನ್ನು ಕೊಲೆ ಮಾಡಲು ಪ್ರಯತ್ನಿಸಿದ್ದರಿಂದ ನಮ್ಮ ರಕ್ಷಣೆಗಾಗಿ ಚಾಸಃ1 ರವರು ಪುನಃ ನಾಲ್ಕು ಸುತ್ತು ಮೇಲಕ್ಕೆ ಗಾಳಿಯಲ್ಲಿ ಗುಂಡನ್ನು ಹಾರಿಸಿರುತ್ತಾರೆ.

ಆಗ ಆರೋಪಿತರು ನಮ್ಮನ್ನು ಬಿಟ್ಟು ಓಡಿಹೋದರು. ಓಡಿಹೋಗುವಾಗ ಕೆಲವರು ಕಬ್ಬಿಣದ ರಾಡ್‌ನ್ನು ತೆಗೆದುಕೊಂಡು ಹೋದರು. ನಮ್ಮ ಮೇಲೆ ಹಲ್ಲೆ ಮಾಡುವ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಲೋ ತಮ್ಮಣ್ಣಿ ಸುಭಾಷ್, ವೆಂಕಟೇಶ, ನಾಗೇಶ, ಮಹದೇವ, ಶಿವು ಮತ್ತು ಮಂಜ ಎಂದು ಮಾತನಾಡಿಕೊಂಡು ನಮ್ಮ ಮೇಲೆ ಹಲ್ಲೆ ಮಾಡುತ್ತಿದ್ದರು.

ಸದರಿ ಹಲ್ಲೆಯಿಂದ ನನ್ನ ಕುತ್ತಿಗೆ, ಬೆನ್ನಿಗೆ, ಬಲಕಾಲಿಗೆ ಗಾಯವಾಗಿದ್ದರಿಂದ ಶಿರಾಳಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.  ಕೃತ್ಯವೆಸಗುತ್ತಿದ್ದಾಗ ಸ್ಥಳಕ್ಕೆ ಎರಡು ಜನರು ಬಂದಿದ್ದು

ಅವರ ಹೆಸರು ಹಬೀಬುಲ್ಲಾ ಮತ್ತು ರಾಮಪ್ಪ ಎಂದು ತಿಳಿಯಿತು. ಕೃತ್ಯವೆಸಗುತ್ತಿದ್ದಾಗ ಆರೋಪಿತರು ಹೇಳುಕೊಳ್ಳುತಿದ್ದ ಹೆಸರುಗಳನ್ನೇ ರಾಮಪ್ಪ ಮತ್ತು ಹಬೀಬುಲ್ಲಾ ಎಂದು ತಿಳಿಸಿದ್ದು ಆಗ ಚಾಸಃ **6** ಮತ್ತು **7** ಅವರು ಗ್ರಾಮಸ್ಥರು ಎಂದು ತಿಳಿಯಿತು.

ಘಟನೆಗೆ ಸಂಬಂಧಿಸಿದಂತೆ ಚಾಸಃ1 ರವರು ಮೇಲಾಧಿಕಾರಿಗೆ ಸಂಪರ್ಕಿಸಿ ಸೊರಬ ಠಾಣೆಯಲ್ಲಿ ದೂರು ನೀಡಿರುವುದನ್ನು ತಿಳಿದುಕೊಂಡಿರುತ್ತೇನೆ. ನಾವೆಲ್ಲರೂ ಕರ್ತವ್ಯದಲ್ಲಿದ್ದ ನಮ್ಮ ಮೇಲೆ ಆರೋಪಿತರು ಹಲ್ಲೆ ಮಾಡಿ ಕೊಲೆಗೆ ಯತ್ನಿಸಿ ಕೃತ್ಯವೆಸಗಿದ್ದಾಗಿರುತ್ತದೆ. ಸೊರಬ ಠಾಣೆಯ ತನಿಖಾಧಿಕಾರಿಯ ಮುಂದೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

ದಿಃ **07-03-2016** ರಂದು ಸೊರಬ ಠಾಣೆಯ ತನಿಖಾಧಿಕಾರಿಯು ದೂರವಾಣಿ ಮೂಲಕ ನಮಗೆ ನಿಮ್ಮ ಮೇಲೆ ಮಾಡಿದ ಆರೋಪಿತರಲ್ಲಿ ನಾಲ್ಕು ಜನರನ್ನು ಬಂಧಿಸಿದ್ದು ಗುರುತಿಸಲು ಕರೆದಿದ್ದು ನಾವು ಠಾಣೆಗೆ ಬಂದು ನಾಲ್ಕು ಆರೋಪಿತರನ್ನು ಗುರುತಿಸುತ್ತೇನೆ. ಅವರುಗಳೆಂದರೆ ವೆಂಕಟೇಶ ನಾಗೇಶ ಸುಭಾಷ್ ಮತ್ತು ತಮ್ಮಣ್ಣಿ. ನಮ್ಮ ಸಮಕ್ಷಮ ಆರೋಪಿ ಸುಭಾಷ್ ನಿಂದ ರಾಡ್ ನ್ನು ಅಮಾನತ್ತು ಪಡಿಸಿಕೊಂಡರು. ಒಂದು ಕಪ್ಪು ಬಣ್ಣದ ಸ್ಯಾಮ್ ಸಂಗ್ ಮೊಬೈಲ್ ವಶಪಡಿಸಿಕೊಂಡರು. ತನಿಖಾಧಿಕಾರಿಯು ಆ ಸಮಯದಲ್ಲಿ ನನ್ನ ಮರುಹೇಳಿಕೆ ಪಡೆದಿದ್ದಾರೆ.

ದಿಃ **29-03-2016** ರಂದು ಸೊರಬ ಠಾಣೆಯ ತನಿಖಾಧಿಕಾರಿಯು ಪುನಃ ದೂರವಾಣಿ ಮೂಲಕ ನಮಗೆ ನಿಮ್ಮ ಮೇಲೆ ಮಾಡಿದ ಆರೋಪಿತರಲ್ಲಿ ಇನ್ನೆರಡು ಜನರನ್ನು ಬಂಧಿಸಿದ್ದು ಗುರುತಿಸಲು ಕರೆದಿದ್ದು ನಾವು ಠಾಣೆಗೆ ಬಂದು ಎರಡು ಜನ ಆರೋಪಿತರನ್ನು ಗುರುತಿಸುತ್ತೇನೆ. ಅವರುಗಳೆಂದರೆ ಮಹಾದೇವ ಮತ್ತು ಶಿವು. ಸದರಿಯವರಿಂದ ಎರಡು ಕಬ್ಬಿಣ ರಾಡ್‌ಗಳನ್ನು ವಶಪಡಿಸಿಕೊಂಡರು. ಆ ಬಗ್ಗೆ ಕೂಡ ತನಿಖಾಧಿಕಾರಿ ನನ್ನ ಮರುಹೇಳಿಕೆ ಪಡೆದಿದ್ದಾರೆ.

ದಿಃ **19-06-2016** ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇನ್ನೊಬ್ಬ ಆರೋಪಿ ಮಂಜ ನಿರೀಕ್ಷಣಾ ಜಾಮೀನು ತಂದು ಹಾಜರಾಗಿದ್ದು ಆತನನ್ನು ಗುರುತಿಸಲು ತನಿಖಾಧಿಕಾರಿ ನಮ್ಮ ಕರೆದಿದ್ದು, ನಾವು ಠಾಣೆಗೆ ಹಾಜರಾಗಿ ಆತನನ್ನು ಗುರುತಿಸಿರುತ್ತೇನೆ. ಸದರಿ ಸಮಯದಲ್ಲಿಯೂ ಸಹ

ತನಿಖಾಧಿಕಾರಿ ನನ್ನಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಆ ದಿನ ನಮ್ಮ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವರನ್ನು ಗುರುತಿಸುತ್ತೇನೆ.

ಚಾಸಃ1 ರವರು ಆ ದಿನ ಗಾಳಿಯಲ್ಲಿ ಗುಂಡು ಹಾರಿಸಿದ್ದ ಮು.ಮಾ.1 ಪಿಸ್ತೂಲ್ ನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.3 ರಿಂದ 6 ದೊಣ್ಣೆಗಳು ಮತ್ತು ಮು.ಮಾ. 7 ರಿಂದ 10 ಕಲ್ಲುಗಳು, ಮು.ಮಾ.12, 14 ರಿಂದ 16 ರಾಡ್ ಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಮು.ಮಾ.13 ಮೊಬೈಲನ್ನು ಗುರುತಿಸುತ್ತೇನೆ.

ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ.ಕೆಕೆಎಸ್.ವಕೀಲರಿಂದಃ

ಮು.ಮಾ. 3 ರಿಂದ 6 ರ ಒಂದು ಭಾಗದಲ್ಲಿ ಕತ್ತಿಯಿಂದ ಕಡಿದ ಗುರುತು ಇದೆ ಎಂದರೆ ಸರಿ. ನಾನು ಮತ್ತು ಚಾಸಃ 2 ಚಿಕ್ಕಮಗಳೂರನ್ನು 8.15 ಗಂಟೆಗೆ ಬಿಟ್ಟು ಆ ದಿನ ಅಜ್ಜಂಪುರಕ್ಕೆ ಬಂದಾಗ ಬೆಳಿಗ್ಗೆ 9.15 ಗಂಟೆಯಾಗಿತ್ತು. ಚಿಕ್ಕಮಗಳೂರಿನಿಂದ ಅಜ್ಜಂಪುರ ಸುಮಾರು 62 ಕಿಮೀ ಅಂತರದಲ್ಲಿದೆ. ನಾನು ಮತ್ತು ಚಾಸಃ 5 ರವರು ಚಿಕ್ಕಮಗಳೂರಿನಿಂದ ಬಸ್ ನಿಂದ ಬಂದಿರುತ್ತೇವೆ. ಚಿಕ್ಕಮಗಳೂರಿನಿಂದ ಅಜ್ಜಂಪುರಕ್ಕೆ ಬರಲು ಕೆಎಸ್ಆರ್ಟಿಸಿ. ಬಸ್ ಎಕ್ಸಪ್ರೆಸ್ ಬಸ್ ಇರುತ್ತದೆ. ನಮಗೆ ನಮ್ಮ ಎಸ್.ಪಿ.ರವರು ಮೊದಲು ಅಜ್ಜಂಪುರಕ್ಕೆ ಚಾಸಃ 1 ರವರನ್ನು ಭೇಟಿ ಮಾಡಲು ಹೇಳಿದ್ದು, ಆ ಸಮಯದಲ್ಲಿ ನಮಗೆ ಲಿಖಿತವಾದ ಆದೇಶ ಕೊಟ್ಟಿರಲಿಲ್ಲ. ಬಸವನಹಳ್ಳಿ ಠಾಣೆಯ ಮೊಕದ್ದಮೆ ಸಂಃ 60/2016 ರಲ್ಲಿ ಪಿರ್ಯಾದನ್ನು ದಿಃ 01-03-2016 ರಂದು ಕೊಟ್ಟಿದ್ದರು. ಆ ಸಮಯದಲ್ಲಿ ನನ್ನ ಬಳಿ ಮೊಕದ್ದಮೆ ಸಂಃ 60/2016 ಪಿರ್ಯಾದಿನ ನಕಲು ಇರಲಿಲ್ಲ. ಈ ಪ್ರಕರಣದಲ್ಲಿ ಪಿರ್ಯಾದುದಾರರ ಮೊಬೈಲ್ ಹಾಜರುಪಡಿಸಿದ್ದೇವಾ ಎಂದು ನನಗೆ ನೆನಪಿಲ್ಲ. ಮು.ಮಾ.13 ರ ಮೊಬೈಲ್ ಯಾರ ಆರೋಪಿಗೆ ಸಂಬಂಧಿಸಿದೆ ಮತ್ತು ಅದರ ಮಾಲೀಕರ ವಿವರ ನನಗೆ ಗೊತ್ತಿಲ್ಲ.

ಆ ದಿನ ಪ್ರಯಾಣ ಮಾಡುತ್ತಿದ್ದ ಡಸ್ಟರ್ ಕಾರು ಚಾಲಕ ಸೇರಿ 6 ಜನ ಪ್ರಯಾಣ ಮಾಡಬಹುದು. ಪಿರ್ಯಾದುದಾರನ ಮೊಬೈಲ್ ನಿಂದ ನಾವು ಆರೋಪಿತರನ್ನು ಸಂಪರ್ಕಿಸಿದಾಗ ಅದು ಯಜಮಾನರು

ತಮ್ಮಣ್ಣ ಎಂದು ಹೇಳಿದರು. ಅಜ್ಜಂಪುರದಿಂದ ಶಿರಾಳಕೊಪ್ಪಕ್ಕೆ 160 ಕಿಮೀ ಇದೆ. ಅಜ್ಜಂಪುರದಿಂದ ನಾವು ತರಿಕೆರೆ, ಭದ್ರಾವತಿ, ಶಿವಮೊಗ್ಗ ಮಾರ್ಗವಾಗಿ ಶಿರಾಳಕೊಪ್ಪಕ್ಕೆ ಬಂದಿರುತ್ತೇವೆ.

ನಾವು ಆ ದಿನ ಶಿರಾಳಕೊಪ್ಪ ತಲುಪಲು ನಾಲ್ಕು ಗಂಟೆ ಸಮಯ ಬೇಕಾಗುತ್ತಿತ್ತು ಎಂದರೆ ಅಜ್ಜಂಪುರದಿಂದ ಶಿರಾಳಕೊಪ್ಪಗೆ ಬರುವಾಗ ಯಾವುದೇ ಘಾಟ್ ಸೆಕ್ಷನ್ ಇರುವುದಿಲ್ಲ ಎಂದು ನುಡಿದಿದ್ದಾರೆ. ನಾವು ವಾಹನದಲ್ಲಿ ಬರುವಾಗ ಚಾಸಃ 1 ರವರು ಆರೋಪಿತರ ಜೊತೆ ಮೊಬೈಲ್ ಸಂಪರ್ಕದಲ್ಲಿದ್ದರು.

ನಾವು ಶಿರಾಳಕೊಪ್ಪದಿಂದ ಇನ್ನೂ 30 ಕಿಮೀ ದೂರದಲ್ಲಿರುವಾಗಲೇ ಆರೋಪಿತರು ನಮ್ಮನ್ನು ಚತ್ರದ ಹಳ್ಳಿಯ ಕೆರೆ ಬರಲು ಹೇಳಿದರು. ನಾವು ಶಿರಾಳಕೊಪ್ಪಕ್ಕೆ ಬಂದಾಗ ಮಧ್ಯಾಹ್ನ 2.30 ಗಂಟೆ ಸಮಯವಾಗಿತ್ತು. ನಾನು ಹೇಳುತ್ತಿರುವ ಚತ್ರದಹಳ್ಳಿ ಕೆರೆ ಸೊರಬಾದಿಂದ ಎರಡು ಕಿಮೀ ಮತ್ತು ಶಿರಾಳಕೊಪ್ಪದಿಂದ ಒಂದು ಕಿಮೀ ಇದೆ ಎಂದರೆ ಸರಿಯಲ್ಲ. ಶಿರಾಳಕೊಪ್ಪದಿಂದ ಘಟನಾ ಸ್ಥಳಕ್ಕೆ ಸುಮಾರು 4 ಕಿಮೀ ಆಗುತ್ತಿದ್ದು ನನಗೆ ಘಟನಾ ಸ್ಥಳದಿಂದ ಸೊರಬಕ್ಕೆ ಎಷ್ಟು ಕಿಮೀ ದೂರವಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹೇಳುತ್ತಿರುವ ಘಟನಾ ಸ್ಥಳ ಚತ್ರದ ಹಳ್ಳಿ ಬೋರ್ಡ ಮಾತ್ರ ಇತ್ತು ಅದು ಗ್ರಾಮದ ಬಳಿ ಇರುವುದಿಲ್ಲ. ಆ ಗ್ರಾಮದಲ್ಲಿ ಸುಮಾರು 400 ಮನೆಗಳು ಇವೆ ಎಂದರೆ ಸರಿಯಲ್ಲ. ಕೆರೆಯ ಏರಿಯ ಮನೆಗಳು ಇರುವ ಜಾಗಕ್ಕೆ ಚತ್ರದ ಹಳ್ಳಿ ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳವು ರಸ್ತೆಯಿಂದ ಸ್ವಲ್ಪ ಇಳಿಜಾರಿನಲ್ಲಿದೆ ಎಂದರೆ ಪ್ರಾರಂಭದಲ್ಲಿ ಸ್ವಲ್ಪ ಇಳಿಜಾರು ಇರುತ್ತದೆ ಎಂದರೆ ಸರಿ.

ಘಟನಾ ಸ್ಥಳಕ್ಕೆ ನಾವೆಲ್ಲಾರೂ ಮತ್ತು ಉಳಿದ ಸಿಬ್ಬಂದಿಗಳು ಒಟ್ಟಾಗಿ ಹೋಗಿರುತ್ತೇವೆ. ಘಟನಾ ಸ್ಥಳದಿಂದ ನಮ್ಮ ವಾಹನ ನಿಲ್ಲಿಸಿದ ಜಾಗಕ್ಕೆ 70 ರಿಂದ 100 ಮೀಟರ್ ಅಂತರದಲ್ಲಿದೆ. ಸದರಿ ಕೆರೆಯಲ್ಲಿ ನೀರು ಇರುವುದಿಲ್ಲ ಎನ್ನುವುದು ಸರಿ. ಸದರಿ ಕೆರೆಯಲ್ಲಿ ಕಸಕಡ್ಡಿ , ಪೇಪರ್ ಗಳು ಬಿದ್ದಿರುತ್ತವೆ ಎಂದರೆ ಸರಿಯಲ್ಲ. ಆದರೆ ಸಣ್ಣ ಸಣ್ಣ ಪೊದೆಗಳು ಇವೆ ಎಂದರೆ ಸರಿ. ಸದರಿ ಕೆರೆ ಸ್ವಚ್ಛವಾಗಿರಲಿಲ್ಲ, ಪೊದೆಗಳು ಇದ್ದವು ಮತ್ತು ಕಲ್ಲುಗಳು ಇದ್ದವು.

ಆ ಸಮಯದಲ್ಲಿ ಆರೋಪಿತರು ಯಾವ ದಿಕ್ಕಿನಲ್ಲಿರುವ ಪೊದೆಗಳಿಂದ ಹೊರಬಂದರು ಎಂದು ನನಗೆ ನಿರ್ದಿಷ್ಟವಾಗಿ ಹೇಳು ಆಗುವುದಿಲ್ಲ. ನಮ್ಮ ವಾಹನವನ್ನು ನಿಲ್ಲಿಸಿದ ಜಾಗದ ಚಕ್ಕುಬಂದಿ ನನಗೆ ಹೇಳಲು ಆಗುತ್ತದೆ. ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಕೆರೆ ಅಂಗಳ, ಉತ್ತರಕ್ಕೆ ಸೊರಬ ರಸ್ತೆ ಮತ್ತು ದಕ್ಷಿಣಕ್ಕೆ ಶಿರಾಳಕೊಪ್ಪ ಇದೆ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಆರೋಪಿತರು ಆ ಸಮಯದಲ್ಲಿ ಯಾರ್ಯಾರು ದೊಣ್ಣೆ ಮತ್ತು ಯಾರ್ಯಾರು ಕಲ್ಲುಗಳನ್ನು ಹಿಡಿದಿದ್ದರು ಎಂದು ನನಗೆ ನಿಖರವಾಗಿ ಈಗ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ನಮ್ಮಿಂದ ಸುಮಾರು 20 ಅಡಿ ಅಂತರದಲ್ಲಿ ಆರೋಪಿತರು ಇದ್ದರು. ಘಟನಾ ಸಮಯದಲ್ಲಿ ನಾವು ಸಮವಸ್ತ್ರ ಇರಲಿಲ್ಲ, ಸಾಮಾನ್ಯ ಜನರಂತೆ ಬಂಗಾರ ಕೊಂಡುಕೊಳ್ಳುವ ಸೋಗಿನಲ್ಲಿ ಹೋಗಿದ್ದೆವು. ಚಾಸಃ 1 ರವರು ಆ ಸಮಯದಲ್ಲಿ ಗಾಳಿಯಲ್ಲಿ ನೇರವಾಗಿ ಮೇಲಕ್ಕೆ ಗುಂಡು ಹಾರಿಸಿರುತ್ತಾರೆ.

ಸಾಮಾನ್ಯವಾಗಿ ಗುಂಡು ಹಾರಿಸಿದಾಗ ಜೋರಾಗಿ ಶಬ್ದ ಬರುತ್ತದೆ ಎಂದರೆ ಸಾಕ್ಷಿ ಅದು ಕೆರೆ ಅಂಗಳವಾಗಿದ್ದರಿಂದ ಸಾಕಷ್ಟು ಪೊದೆಗಳು ಇದ್ದುದರಿಂದ ಹೆಚ್ಚು ಶಬ್ದ ಬಂದಿಲ್ಲ ಎಂದು ನುಡಿದಿದ್ದಾರೆ. ಸದರಿ ಘಟನೆಯಾದ ಸ್ಥಳದಿಂದ ನಾವು ರಸ್ತೆಗೆ ಬಂದಾಗ ರಾಮಪ್ಪ ಮತ್ತು ಹಬೀಬು ಆ ರಸ್ತೆಗೆ ಬಂದಾಗ ಅವರು ಬಂದಿದ್ದು ಬೇರೆ ಯಾರು ಯಾವುದೇ ಸಾರ್ವಜನಿಕರು ಆ ಸಮಯದಲ್ಲಿ ಬಂದಿರಲಿಲ್ಲ. ಈ ಘಟನೆಯಲ್ಲಿ ನನಗೆ ನನ್ನ ಭುಜ ಮತ್ತು ಬಲಗೈ ಹೆಬ್ಬೆರಳಿಗೆ ಹೊಡೆತ ಬಿದ್ದಿಲ್ಲ ಎಂದರೆ ಸರಿಯಲ್ಲ. ಈ ಘಟನೆಯಲ್ಲಿ ನನಗೆ ನೋವಾದ ಜಾಗದಲ್ಲಿ ರಕ್ತ ಹೆಪ್ಪು ಗಟ್ಟಿತ್ತು, ರಕ್ತಸ್ರಾವ ಆಗಿರಲಿಲ್ಲ. ಘಟನಾ ಸ್ಥಳದಿಂದ ಸೊರಬ ಮತ್ತು ಶಿರಾಳಕೊಪ್ಪ ಎರಡು ಸ್ಥಳಗಳಲ್ಲಿ ಠಾಣೆಗಳು ಇವೆ. ಘಟನಾ ಸ್ಥಳ ಸೊರಬ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ. ನಾವು ಘಟನಾ ಸ್ಥಳಕ್ಕೆ ಬರುವ ಮೊದಲು ಸೊರಬ ಠಾಣೆಗೆ ಯಾವುದೇ ಮಾಹಿತಿ ನೀಡಿರಲಿಲ್ಲ. ನಾವು ನಮ್ಮ ವಾಹನವನ್ನು ಶಿರಾಳಕೊಪ್ಪಕ್ಕೆ ಹೋಗುವ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದೆವು. ನಿಪಿ-4 ರಲ್ಲಿ ನಾವು ವಾಹನ ನಿಲ್ಲಿಸಿದ್ದೆವು ಎಂದು ಹೇಳುವ ಜಾಗದಲ್ಲಿ ಅದನ್ನು ತೋರಿಸಿಲ್ಲ ಎಂದರೆ ನನಗೆ ನೆನಪಿಲ್ಲ. ನಮ್ಮ ಎಲ್ಲರ

ಮುಂಭಾಗದಲ್ಲಿ ಘಟನಾ ಸಮಯದಲ್ಲಿ ಚಾಸಃ1 ರವರು ಮುಂದೆ ಇದ್ದರು. ಆ ಸಮಯದಲ್ಲಿ ಆರೋಪಿತರು ನಮ್ಮಿಂದ ಸುಮಾರು 100 ಅಡಿ ಅಂತರದಲ್ಲಿದ್ದರು.

ಈ ಘಟನೆ ಆ ದಿನ ಮದ್ಯಾಹ್ನ 3.00 ರಿಂದ 4.30 ಗಂಟೆಯವರೆಗೆ ನಡೆದಿದೆ. ನಾನು ಆ ದಿನ ಆಸ್ಪತ್ರೆಗೆ 6.00 ಗಂಟೆಯಾಗಿತ್ತು. ಆಸ್ಪತ್ರೆಯಲ್ಲಿ ವೈದ್ಯರು ಇದ್ದೆವು. ನಾವು ವೈದ್ಯರಿಗೆ ಈ ಘಟನೆಯ ಸಮಯದಲ್ಲಿ ಐದರಿಂದ ಎಂಟು ಜನ ಸೇರಿ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ.

ದಿಃ 07-03-2016 ರಂದು ನಮ್ಮ ಇಲಾಖಾ ಜೀಪಿನಲ್ಲಿ ಸೊರಬ ಠಾಣೆಗೆ ಬಂದಿದ್ದು ಆ ದಿನ ಎಷ್ಟು ಗಂಟೆಗೆ ಠಾಣೆಗೆ ಹೋದೆವು ಎಂದು ನನಗೆ ನೆನಪಿಲ್ಲ. ದಿಃ **29–03–2016** ರಂದು ಸೊರಬ ಠಾಣೆಗೆ ಎಷ್ಟು ಗಂಟೆಗೆ ಬಂದಿರುತ್ತೇವೆ ಎಂದು ನನಗೆ ನೆನಪಿಲ್ಲ. ಆ ದಿನವೂ ಸಹ ನಾವು ಇಲಾಖಾ ಜೀಪಿನಲ್ಲಿ ಬಂದಿರುತ್ತೇವೆ. ದಿಃ **19–06–2016** ರಂದು ಸೊರಬ ಠಾಣೆಗೆ ಎಷ್ಟು ಗಂಟೆಗೆ ಬಂದಿರುತ್ತೇವೆ ಎಂದು ನನಗೆ ನೆನಪಿಲ್ಲ.ಆ ದಿನವೂ ಸಹ ನಾವು ಬಸ್ಸಿನಲ್ಲಿ ಬಂದಿರುತ್ತೇವೆ. ಆ ದಿನ ಸಾಯಂಕಾಲ **7.00** ಗಂಟೆಗೆ ಸೊರಬ ಠಾಣೆಯಲ್ಲಿ ಪಿರ್ಯಾದು ಕೊಟ್ಟಿರುತ್ತೇವೆ. ಪಿರ್ಯಾದನ್ನು ಸೊರಬ ಠಾಣೆಯಲ್ಲಿರುವ ಪಕ್ಕದಲ್ಲಿರುವ ಬೆರಳಚ್ಚು ಅಂಗಡಿಯಲ್ಲಿ ಬೆರಳಚ್ಚು ಮಾಡಿಸಿರುತ್ತೇವೆ.

ನಾವು ಚಿಕಿತ್ಸೆ ಪಡೆದ ಆಸ್ಪತ್ರೆಯ ವೈದ್ಯರು ನಮಗೆ ಆ ದಿನ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯ ಎಂದು ಹೇಳಿ ದೃಢೀಕರಣ ಪತ್ರ ಕೊಟ್ಟಿದ್ದಾರೆ ಎಂದರೆ ಇರಬಹುದು. ಚಾಸಃ 1 ರವರು ಗುಂಡು ಹಾರಿಸಿದ ಸಮಯದಲ್ಲಿ ಬಂದೂಕಿನ ಹಿಂದಿನ ಬಾಗ ವಾಪಾಸ್ಸು ಬಂದು ನಂತರ ಮುಂದೆ ಹೋಗಿದೆ ಎಂದರೆ ಸಾಕ್ಷಿ ಅದನ್ನು ನಾನು ಗಮನಿಸಿಲ್ಲ ಎಂದು ನುಡಿದಿದ್ದಾರೆ. ಸಾಮಾನ್ಯವಾಗಿ ಒಂದು ಬಾರಿ ಗುಂಡು ಹಾರಿಸಿದರೆ ಎದುರಿನ ವ್ಯಕ್ತಿ ಓಡಿ ಹೋಗುತ್ತಿದ್ದು ನಾನು ಹೇಳುತ್ತಿರುವಂತೆ ಘಟನಾ ಸಮಯದಲ್ಲಿ ನಾಲ್ಕು ಬಾರಿ ಗುಂಡು ಹಾರಿಸಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಃ 1 ರವರು ಹೊಸದಾಗಿ ನೌಕರಿಗೆ ಸೇರಿದ್ದು ಅವರು ನಮ್ಮ ಇಲಾಖೆಯಲ್ಲಿ ಸಾಕಷ್ಟು ಸಾಧನೆ ಮಾಡಬೇಕು ಎಂಬ ಉದ್ದೇಶದಿಂದ ನಾವು ಘಟನೆ ಯಾಯಿತು ಎಂದು ಹೇಳುವ ಸ್ಥಳದಲ್ಲಿ ಯಾರು ಆರೋಪಿತರು ಇಲ್ಲದಿದ್ದು, ಆ ಸಮಯದಲ್ಲಿ ಚಾಸಃ1 ನೆಲಕ್ಕೆ ಗುಂಡು

ಹೊಡೆದಿದ್ದು, ನಾವು ಆರೋಪಿಗಳಿಂದ ರಕ್ಷಣೆ ಮಾಡಿಕೊಳ್ಳಲು ಗಾಳಿಯಲ್ಲಿ ನಾಲ್ಕು ಬಾರಿ ಗುಂಡು ಹಾರಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಕಲ್ಲು ಹೊಡೆಯುತ್ತಿದ್ದ ಸಮಯದಲ್ಲಿ ನಾವು ಕೆರೆ ಅಂಗಳದಲ್ಲಿ ತಪ್ಪಿಸಿಕೊಂಡು ಓಡಾಡುತ್ತಿದ್ದೆವು. ನಾವು ಆದಿನ ಆ ಸ್ಥಳಕ್ಕೆ ಡಸ್ಟರ್ ಕಾರಿನಲ್ಲಿ ಬಂದಿಲ್ಲ, ನನಗೆ ಈ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ, ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ಧ ಘಟನೆಯಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 07-03-2016 ರಂದು ನಾವು ಠಾಣೆಯಲ್ಲಿ ಆರೋಪಿತರನ್ನು ಗುರುತಿಸಿರುವ ಬಗ್ಗೆ ಅವರ ಚಹರೆಯನ್ನು ನಾವು ಪೋಲಿಸರಿಗೆ ಹೇಳಿದ್ದು, ಆದರೆ ಅವರು ಯಾವ ಬಣ್ಣದ ಬಟ್ಟೆ ಹಾಕಿದ್ದರು ಎಂದು ಹೇಳಿಲ್ಲ. ಈ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿತರನ್ನು ನಾವು ಪಿರ್ಯಾದುದಾರ ಮೊಬೈಲ್ ಮೂಲಕ ಆರೋಪಿತರನ್ನು ಶೋಧನೆ ಮಾಡಿಕೊಂಡು ಬರುತ್ತಿದ್ದನ್ನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ, ಆದರೆ ಪೋಲಿಸ್ ಠಾಣೆಗೆ ಮಾಹಿತಿ ನೀಡಿರಲಿಲ್ಲ.

ನಾವು ಹಾಜರುಪಡಿಸಿರುವ ಮು.ಮಾ.12 ಮತ್ತು 14 ರಿಂದ 16 ಸೊರಬ ಠಾಣೆಯ ಕಟ್ಟಡ ಕಾಮಗಾರಿ ಕೆಲಸ ನಡೆಯುತ್ತಿದ್ದು ಅವುಗಳಲ್ಲಿ ತ್ಯಾಜ್ಯವಸ್ತುಗಳಾಗಿದ್ದು ಅವುಗಳು ಈ ಘಟನೆಗೆ ಸಂಬಂಧಿಸಿದೆ ಎಂದು ಹೇಳಿ ಈ ಘಟನೆಯಲ್ಲಿ ಅವುಗಳನ್ನು ಸೇರಿಸಿರುತ್ತೇವೆ ಎನ್ನುವುದು ಸರಿಯಲ್ಲ. ಮು.ಮಾ.3 ರಿಂದ 6 ಗೊಬ್ಬರದ ಟೊಳ್ಳು ಕಟ್ಟಿಗೆಗಳು ಮತ್ತು ಅದರಲ್ಲಿ ಹೊಡೆದರೆ ಆ ಕಟ್ಟಿಗೆ ಗಳು ಮುರಿದು ಹೋಗುತ್ತವೆ ಎಂದರೆ ಸರಿಯಲ್ಲ. ನಾವು ಆ ಸ್ಥಳದಲ್ಲಿ ಬಿದ್ದಿದ್ದ ಕಟ್ಟಿಗೆಗಳನ್ನು ತೆಗೆದುಕೊಂಡು ಬಂದು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ.7 ರಿಂದ 10 ರಸ್ತೆಯನ್ನು ಮತ್ತು ಕಟ್ಟಡವನ್ನು ನಿರ್ಮಿಸುವಾಗ ಬಳಸುವ ದೊಡ್ಡಕಲ್ಲುಗಳ ಚೂರು ಕಲ್ಲುಗಳಾಗಿದ್ದು ಅವು ಕಾಡುಜಾತಿಯ ಕಲ್ಲುಗಳ ಅಲ್ಲ ಎಂದರೆ ಸರಿಯಲ್ಲ.

ದಿಃ 29-03-2016 ಮತ್ತು ದಿಃ 19-06-2016 ರಂದು ಪುನಃ ನಾನು ಸೊರಬ ಠಾಣೆಗೆ ಬಂದಿಲ್ಲ ಮತ್ತು ಆರೋಪಿತರನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೊರಬ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕುತ್ತಿಗೆಯ ಹಿಂಭಾಗ ಮತ್ತು ಬಲಕಾಲಿಗೆ ಬಿದ್ದಿದ್ದ ಪೆಟ್ಟು ಅದು ಕಲ್ಲು ಮತ್ತು ಕಟ್ಟಿಗೆ ಯಿಂದ ಇರಬಹುದು ಎಂದು ನನಗೆ ಹೇಳಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ಮು.ಮಾ. 7 ರಿಂದ 10 ಕಲ್ಲುಗಳಿಂದ ಹೊಡೆದರೆ ರಕ್ತ ಹೆಪ್ಪುಗಟ್ಟುವುದಿಲ್ಲ, ರಕ್ತಸ್ರಾವವಾಗುತ್ತದೆ ಎಂದರೆ ಸಾಕ್ಷಿ ಅದು ನನ್ನ ಭುಜಕ್ಕೆ ಬಿದ್ದಿದ್ದರಿಂದ ರಕ್ತಸ್ರಾವವಾಗಿಲ್ಲ ಎಂದು ನುಡಿದಿದ್ದಾರೆ. ನನ್ನ ಕುತ್ತಿಗೆಯ ಹಿಂಭಾಗ ಮತ್ತು ಬಲಕಾಲಿಗೆ ಮು.ಮಾ.7 ರಿಂದ 10 ನ್ನು ಬೀಸಿಹೊಡೆದರೆ ರಕ್ತಸ್ರಾವ ವಾಗುವ ಗಾಯವಾಗುತ್ತಿತ್ತು ಎಂದರೆ ಸಾಕ್ಷಿ ಅದು ನನಗೆ ದೊಣ್ಣೆಯಿಂದ ಬಿದ್ದಿದೆ ಎಂದು ನುಡಿದಿದ್ದಾರೆ. ಮು.ಮಾ. 3 ರಿಂದ 6 , 7 ರಿಂದ 10, 12 ಮತ್ತು 14 ರಿಂದ 16 ಈ ಘಟನೆಯಲ್ಲಿ ಉಪಯೋಗಿಸಿದವು ಎಂದು ಹೇಳಲು ನನಗೆ ಸಾಧ್ಯವಾಗುತ್ತದೆ. ಮು.ಮಾ.3 ರಿಂದ 6 ಸಾಮಾನ್ಯವಾಗಿ ಬೇಲಿ ಹಾಕಲು ಉಪಯೋಗಿಸುವ ಕಾಡುಜಾತಿಯ ದೊಣ್ಣೆಗಳಾಗಿದ್ದು ಅವು ಬೇಲಿ ಬಳಿ ಸಾಕಷ್ಟು ಸಿಗುತ್ತದೆ ಎಂದರೆ ಸರಿಯಲ್ಲ. ಮು.ಮಾ.3 ರಿಂದ 6, 12 ಮತ್ತು 14 ರಿಂದ 16 ಅಂದರೆ ನಾಲ್ಕು ದೊಣ್ಣೆಗಳು ಮತ್ತು ನಾಲ್ಕು ರಾಡ್ ಗಳು ಇದ್ದು ಆರೋಪಿತರು 7 ಜನ ಮಾತ್ರ ಇರುವುದರಿಂದ ಘಟನೆ ಸಮಯದಲ್ಲಿ ಯಾವ ಆರೋಪಿತನ ಕೈ ಎರಡು ಆಯುಧಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ.

ಮು.ಮಾ.1 ರಿಂದ 16 ಗೆ ಮತ್ತು ಆರೋಪಿ ಸಂಃ 1 ರಿಂದ 4 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳನ್ನು ಮೆಚ್ಚಿಸಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **5** ರಿಂದ **7** ನೇ ಆರೋಪಿತರ ಪರ ಶ್ರೀ.ಬಿಕೆವಿ. ವಕೀಲರಿಂದಃ

ದಿಃ 07-03-2016, 29-03-2016 ದ 19-06-2016 ರಂದು ಆ ದಿನಗಳಲ್ಲಿ ನಾವು ಅಜ್ಜಂಪುರದಿಂದ ಬೆಳಿಗ್ಗೆ 8.30 ಗಂಟೆಗೆ ಬಿಟ್ಟು ಸೊರಬ ಠಾಣೆಗೆ ಬಂದಿದ್ದು ಆಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ಸಾಮಾನ್ಯವಾಗಿ ನಮ್ಮ ಇಲಾಖೆಯ ಜೀಪನ್ನು ನಮ್ಮ ಸಿಬ್ಬಂದಿ ಚಾಲಕರು ಓಡಿಸಬೇಕು ಎಂದರೆ

ಸರಿ. ಆಸ್ಪತ್ರೆಯಲ್ಲಿ ವೈದ್ಯರಿಗೆ ಘಟನೆಯ ಬಗ್ಗೆ ನಾನೇ ಹೇಳಿರುತ್ತೇನೆ. ನಾವು ನಾಲ್ಕು ಜನ ಸಿಬ್ಬಂದಿಯವರು ಪ್ರತ್ಯೇಕವಾಗಿ ವೈದ್ಯರಿಗೆ ಹೇಳಿಕೆ ಕೊಟ್ಟಿರುತ್ತೇವೆ. ನಾವು ವೈದ್ಯರಿಗೆ ಘಟನೆಯಲ್ಲಿ ನಮ್ಮನ್ನು ಸುಮಾರು 5 ರಿಂದ 8 ಜನ ಹಲ್ಲೆ ಮಾಡಿದ್ದಾರೆಂದು ಹೇಳಿರುತ್ತೇನೆ. ನಿಪಿ-11 ರಲ್ಲಿ ನಾನು ಘಟನೆಯ ಬಗ್ಗೆ ನನ್ನ ಮೇಲೆ ಎಷ್ಟು ಜನರು ಹಲ್ಲೆ ಮಾಡಿದ್ದಾರೆ ಎಂದು ಹೇಳಿದ್ದನ್ನು ಅವರು ಬರೆದಿಲ್ಲ ಎಂದರೆ ಸರಿ.

ಚಿಕ್ಕಮಗಳೂರಿನಿಂದ ಅಜ್ಜಂಪುರಕ್ಕೆ ನೇರವಾಗಿ ಬಸ್ಸಗಳು ಇಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಬರುವ ಮೊದಲು ಚಾಸಃ 1 ರವರು ಆರೋಪಿತರನ್ನು ಶೋಧಿಸುತ್ತಾ ಎಷ್ಟು ಬಾರಿ ಮೊಬೈಲ್ ನಲ್ಲಿ ಕರೆ ಮಾಡಿದ್ದರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನಾವು ಈ ಪ್ರಕರಣದಲ್ಲಿ ತೆಗೆದುಕೊಂಡು ಹೋಗಿದ್ದ ಖಾಸಗಿ ವಾಹನದ ಮಾಲಿಕರು ಚಾಸಃ1 ಗೆ ಗೊತ್ತು. ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ವಾಹನದಲ್ಲಿ ನಾವು 5 ಜನ ಪೋಲಿಸರು ಇದ್ದು ಚಾಲಕ ಮಾತ್ರ ಖಾಸಗಿ ವ್ಯಕ್ತಿಯಾಗಿರುತ್ತಾನೆ

ಈ ಘಟನೆಯಲ್ಲಿ ನನಗೆ ಹೊಡೆತ ಬಿದ್ದಿದ್ದರಿಂದ ನಾನು ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿ. ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ನಾನು ಹೊಡೆತ ಹೇಗೆ ಬಿದ್ದಿದೆ ಎಂದು ಹೇಳಿದ್ದೇನೆ. ನನಗೆ ಘಟನೆಯಲ್ಲಿ ತೀವ್ರ ಸ್ವರೂಪದ ಗಾಯಗಳಾಗಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಪೊದೆಗಳು ಇದ್ದುದರಿಂದ ನಾವು ಓಡಾಡುವಾಗ ನನಗೆ ಗಾಯಗಳಾಗಿದ್ದು, ನಾನು ಹೇಳುವಂತೆ ನನಗೆ ಆರೋಪಿತರು ಯಾವುದರಿಂದಲೂ ಹೊಡೆದಿಲ್ಲ ಎಂದರೆ ಸರಿಯಲ್ಲ. ಸೊರಬ ಠಾಣೆಗೆ ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 01-03-2016, 07-03-2016, 29-03-2016 ಮತ್ತು 19-06-2016 ರಂದು ಹೋಗಿರುತ್ತೇನೆ. ನನಗೆ ಠಾಣೆಗೆ ಬರಲು ಸೊರಬ ಪೋಲಿಸರು ಪೋನ್ ಮಾಡಿ ತಿಳಿಸಿದ್ದರು, ನನಗೆ ನೋಟಿಸು ಕೊಟ್ಟಿಲ್ಲ, ಚಾಸಃ 1 ಗೆ ನೋಟಿಸು ಕೊಟ್ಟಿರಬಹುದು. ಆರೋಪಿತರು ಯಾವ್ಯಾವಾ ದಿಕ್ಕಿಗೆ ಯಾರ್ಯಾರು ಓಡಿಹೋದರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ.

ನಾನು ಖಾಸಗಿ ವಾಹನದ ಹಿಂಭಾಗದ ಸೀಟಿನಲ್ಲಿ ಮಧ್ಯೆದಲ್ಲಿ ಒಟ್ಟು ಕುಳಿತಿದ್ದೆವು, ಅದು ಡಸ್ಟರ್ ವಾಹನದ 3 ನೇ ಸೀಟು ಎಂದರೆ ಇರಬಹುದು, ನನಗೆ ಜ್ಞಾಪಕವಿಲ್ಲ. ಚಿಕ್ಕಮಗಳೂರಿನ ಎಸ್.ಪಿ.

ಕಛೇರಿಯಿಂದ ಬಸವಹಳ್ಳಿ ಠಾಣೆಯು 4 ಕಿಮೀ ಅಂತರದಲ್ಲಿದೆ. ಸೊರಬ ಠಾಣೆಯಲ್ಲಿ ಪೋಲಿಸರು ಹೇಳಿದ್ದರಿಂದ ನನಗೆ ಆರೋಪಿತರ ಹೆಸರು ಗೊತ್ತಾಗಿದೆ ಎಂದರೆ ಸರಿ. ಮು.ಮಾ. 1 ರಿಂದ 16 ರಮೇಲೆ ಯಾವುದೇ ಪಂಚ ಸಾಕ್ಷಿಗಳ ಸಹಿ ಇಲ್ಲ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 16 ಗೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಅಜ್ಜಂಪುರದಿಂದ ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ ಆರೋಪಿತರು ಚಾಸಃ1 ರ ಜೊತೆ ಎಷ್ಟು ಸಾರಿ ಮೊಬೈಲ್ ನಲ್ಲಿ ಮಾತನಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಆ ಸಮಯದಲ್ಲಿ ಆ ವಾಹನದ ಎಡಭಾಗದ ಕೊನೆಯಲ್ಲಿ ಕುಳಿತಿದ್ದೆ. ವಾಹನ ಚಲಿಸುತ್ತಿದ್ದಾಗ ನಮಗೆ ಶಬ್ದ ಜಾಸ್ತಿ ಇದ್ದುದರಿಂದ ಚಾಸಃ1 ರವರು ಆರೋಪಿತರ ಜೊತೆ ಸಂಪರ್ಕದಲ್ಲಿರುವ ಏನು ಮಾತನಾಡುತ್ತಿದ್ದರು ಎಂದು ಸರಿಯಾಗಿ ಕೇಳುಸುತ್ತಿರಲಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಷ್ಟು ಮಹಜರ್ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಮಹಜರ್ ಗಳಿಗೆ ನಾನು ಸಹಿ ಮಾಡಿದ್ದೇನಾ ಎಂದು ನನಗೆ ನೆನಪಿಲ್ಲ. ಘಟನೆಯಾದ ಮಾರನೇ ದಿನ ನಮ್ಮ ಠಾಣೆಗೆ ಹಿಂದಿರುಗಿದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ಘಟನೆಯಾದ ನಂತರ ನಾವು ನಮ್ಮ ನಮ್ಮ ಠಾಣೆಗೆ ಹೋಗುವಾಗ ಚಾಸಃ1 ರ ಜೊತೆಯಲ್ಲಿದ್ದೆವು. ನಾವು ಶಿರಾಳಕೊಪ್ಪ ಆಸ್ಪತ್ರೆಗೆ ಹೋಗುವ ಮೊದಲು ಸೊರಬ ಠಾಣೆಗೆ ದೂರವಾಣಿ ಮೂಲಕ ವಿಷಯ ತಿಳಿಸಿದ್ದೆವು.

ನಾವು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಸಮಯದಲ್ಲಿ ಆಸ್ಪತ್ರೆಗೆ ಪೋಲಿಸರು ಬಂದಿರಲಿಲ್ಲ. ನಾನು ಹೇಳುವಂತೆ ಯಾವುದೇ ಘಟನೆ ನಡೆದಿಲ್ಲ ಮತ್ತು ಮು.ಮಾ.1 ರಿಂದ ಯಾವುದೇ ಕಾರಣ ಇಲ್ಲದೇ ಗುಂಡು ಹಾರಿಸಿದ್ದು ಅದರ ಬಗ್ಗೆ ನಾವು ಇಲಾಖೆಯಲ್ಲಿ ಸಮಾಜಾಯಿಷಿ ನೀಡಬೇಕಾದ್ದರಿಂದ ಈ ಸುಳ್ಳು ಪ್ರಕರಣ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಮಹಜರ್ ಸಮಯದಲ್ಲಿ ನಾವು ಇಲ್ಲದೇ ಇದ್ದುದರಿಂದ ಮು.ಮಾ.1 ರಿಂದ 16 ರ ಮೇಲೆ ನಮ್ಮ ಸಹಿಗಳನ್ನು ಮಹಜರ್ ನಲ್ಲಿ ತೆಗೆದುಕೊಂಡಿಲ್ಲ ಮತ್ತು ಪಂಚ ಸಹಿಗಳು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಮೂರು ಬಾರಿ ಮರುಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ಹೇಳುವಂತೆ ಆ ದಿನ ಯಾವುದೇ ಘಟನೆ ಆಗಿಲ್ಲ, ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಯಾವುದೇ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಸಾಮಾನ್ಯವಾಗಿ ನಾವು ಯಾವುದೇ ಕರ್ತವ್ಯದ ಮೇಲೆ ಠಾಣೆಯಿಂದ ಹೊರಗೆ ಹೋದಾಗ ಅದನ್ನು ವಿವರವಾಗಿ ರಿಜಿಸ್ಟರ್ ನಲ್ಲಿ ಬರೆಯ ಬೇಕಾಗುತ್ತದೆ ಎಂದರೆ ಸಾಕ್ಷಿ ವಿಶೇಷ ಕರ್ತವ್ಯಕ್ಕೆ ನಿಯೋಜಿಸಿದಾಗ ಅದನ್ನು ಬರೆಯುವ ಅವಶ್ಯಕತೆ ಇಲ್ಲಎಂದು ನುಡಿದಿದ್ದಾರೆ. ನಾವು ತೆಗೆದುಕೊಂಡು ಹೋದ ಪಿರ್ಯಾದಿದಾರ ಮೊಬೈಲ್ ನಿಂದ ಆರೋಪಿತರಿಗೆ ಕರೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

(ಉಳಿದ ಪಾಟೀ ಸವಾಲನ್ನು ಶ್ರೀ. ಕೆ.ಕೆ.ಎಸ್. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ. )

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **07**
ಸಿಡಬ್ಲೂ **06**

| | | |
|---|---|---|
| ಸಾಕ್ಷಿ ಹೆಸರು | – | ಹಬೀಬುಲ್ಲಾ |
| ತಂದೆ ಹೆಸರು | – | ಮಹಮದ್ ಹಯಾತ್ |
| ವಯಸ್ಸು | – | **53** ವರ್ಷ |
| ಉದ್ಯೋಗ | – | ವ್ಯವಸಾಯ |
| ವಿಳಾಸಃ | – | ದುರ್ಗಾಂಬ ದೇವಸ್ಥಾನದ ಹತ್ತಿರ, ಶಿರಾಳಕೊಪ್ಪ |

ಪ್ರಮಾಣ ವಚನ ಭೋದಿಸಿದ ದಿನಾಂಕಃ **28–07–2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಃ **7** ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿಲ್ಲ. ಪೋಲಿಸರಿಗೆ ಮತ್ತು ಆರೋಪಿತರ ನಡುವೆ ಗಲಾಟೆಯಾದ ವಿಷಯ ನನಗೆ ಗೊತ್ತಿಲ್ಲ. ಚತ್ರದಹಳ್ಳಿಯ ಕೆರೆಯ ಪಕ್ಕದಲ್ಲಿ ನನ್ನ ತೋಟವಿದೆ. ಮು.ಮಾ. **3** ರಿಂದ **10, 12** ರಿಂದ **16** ನ್ನು ನಾನು ನೋಡಿರುವುದಿಲ್ಲ. ಪೋಲಿಸರ ಮುಂದೆ ನಾನು ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಠಾಣೆಯಲ್ಲಿ ಆರೋಪಿತರನ್ನು ಮತ್ತು ಆಯುಧಗಳನ್ನು ಗುರುತಿಸಿರುವುದಿಲ್ಲ. ಮತ್ತು ಈ ಬಗ್ಗೆ ಯಾವುದೇ ಮರುಹೇಳಿಕೆ ಕೊಟ್ಟಿರುವುದಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಘಟನೆಯನ್ನು ನಾನು ಕಣ್ಣಾರೆ ನೋಡಿರುತ್ತೇನೆ ಎನ್ನುವುದು ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ದಿಃ 01-03-2016 ರಂದು ಮದ್ಯಾಹ್ನ ಸುಮಾರು 2.45 ಗಂಟೆ ಸಮಯದಲ್ಲಿ

............................ಬಿದ್ದಿದ್ದ ವಸ್ತುಗಳನ್ನು ಗುರುತಿಸುತ್ತೇನೆ ಎಂದು ನಿಪಿ-12 ರಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ಮು.ಮಾ. 14 ನ್ನು ವಶಪಡಿಸಿಕೊಂಡಿದ್ದನ್ನು ನಾನು ಠಾಣೆಯಲ್ಲಿ ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.3 ರಿಂದ 6, 7 ರಿಂದ 10, 12, 13 ನ್ನು ನಾನು ಠಾಣೆಯಲ್ಲಿ ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಮುಂದುವರಿದು ನಾನು ದಿಃ 02-03-2016 ರಂದು ............... ಸಹ ಅಮಾನತ್ತು ಪಡಿಸಿದ್ದಾಗಿರುತ್ತದೆ ಎಂದು ನಿಪಿ-13 ರ ಪ್ರಕಾರ ಪೋಲಿಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 29-03-2016 ರಂದು ನೀಡಿದ ಮರುಹೇಳಿಕೆಯಂತೆ ಮು.ಮಾ. 15 ಮತ್ತು 16 ನ್ನು ಠಾಣೆಯಲ್ಲಿ ಗುರುತಿಸಿರುತ್ತೇನೆ ಎಂದು ನಿಪಿ-14 ರ ಪ್ರಕಾರ ಪೋಲಿಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ನಾನು ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **1** ರಿಂದ **4** ನೇ ಆರೋಪಿತರ ಪರ ಶ್ರೀ. ಕೆಕೆಎಸ್. ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಪಾಟೀ ಸವಾಲುಃ **5** ರಿಂದ **7** ನೇ ಆರೋಪಿತರ ಪರ ಶ್ರೀ. ಬಿಕೆವಿ. ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು) ಓ. ಹೇ. ಕೇ. ಸ ಇದೆ,

**5** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **08**
ಸಿಡಬ್ಲೂ **07**

| | | |
|---|---|---|
| ಸಾಕ್ಷಿ ಹೆಸರು | - | ರಾಮಪ್ಪ |
| ತಂದೆ ಹೆಸರು | - | ಪುಟ್ಟಪ್ಪ |
| ವಯಸ್ಸು | - | **57** ವರ್ಷ |
| ಉದ್ಯೋಗ | - | ಕೂಲಿ |
| ವಿಳಾಸಃ | - | ಸುತ್ ಕೋಟೆ ಗ್ರಾಮ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **28-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಃ **7** ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿಲ್ಲ. ಪೋಲಿಸರಿಗೆ ಮತ್ತು ಆರೋಪಿತರ ನಡುವೆ ಗಲಾಟೆಯಾದ ವಿಷಯ ನನಗೆ ಗೊತ್ತಿಲ್ಲ. ಚತ್ರದಹಳ್ಳಿಯ ಕೆರೆಯ ಪಕ್ಕದಲ್ಲಿ ನನ್ನ ತೋಟವಿದೆ. ಮು.ಮಾ. **3** ರಿಂದ **10, 12** ರಿಂದ **16** ನ್ನು ನಾನು ನೋಡಿರುವುದಿಲ್ಲ. ಪೋಲಿಸರ ಮುಂದೆ ನಾನು ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಠಾಣೆಯಲ್ಲಿ ಆರೋಪಿತರನ್ನು ಮತ್ತು ಆಯುಧಗಳನ್ನು ಗುರುತಿಸಿರುವುದಿಲ್ಲ. ಮತ್ತು ಈ ಬಗ್ಗೆ ಯಾವುದೇ ಮರುಹೇಳಿಕೆ ಕೊಟ್ಟಿರುವುದಿಲ್ಲ.
(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಘಟನೆಯನ್ನು ನಾನು ಕಣ್ಣಾರೆ ನೋಡಿರುತ್ತೇನೆ ಎನ್ನುವುದು ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ದಿಃ 01-03-2016 ರಂದು ಮದ್ಯಾಹ್ನ ಸುಮಾರು 2.45 ಗಂಟೆ ಸಮಯದಲ್ಲಿ ............................ಬಿದ್ದಿದ್ದ ವಸ್ತುಗಳನ್ನು ಗುರುತಿಸುತ್ತೇನೆ ಎಂದು ನಿಪಿ-15 ರಂತೆ ಪೋಲಿಸರ ಮುಂದೆ

ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ಮು.ಮಾ. 14 ನ್ನು ವಶಪಡಿಸಿಕೊಂಡಿದ್ದನ್ನು ನಾನು ಠಾಣೆಯಲ್ಲಿ ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.3 ರಿಂದ 6, 7 ರಿಂದ 10, 12, 13 ನ್ನು ನಾನು ಠಾಣೆಯಲ್ಲಿ ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಮುಂದುವರಿದು ನಾನು ದಿಃ 02-03-2016 ರಂದು ............... ಸಹ ಅಮಾನತ್ತು ಪಡಿಸಿದ್ದಾಗಿರುತ್ತದೆ ಎಂದು ನಿಪಿ-16 ರ ಪ್ರಕಾರ ಪೋಲಿಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 29-03-2016 ರಂದು ನೀಡಿದ ಮರುಹೇಳಿಕೆಯಂತೆ ಮು.ಮಾ. 15 ಮತ್ತು 16 ನ್ನು ಠಾಣೆಯಲ್ಲಿ ಗುರುತಿಸಿರುತ್ತೇನೆ ಎಂದು ನಿಪಿ-17 ರ ಪ್ರಕಾರ ಪೋಲಿಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ನಾನು ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ. ಕೆಕೆಎಸ್. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

<u>ಪಾಟೀ ಸವಾಲುಃ 5 ರಿಂದ 7 ನೇ ಆರೋಪಿತರ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು) ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)